# ಕರ್ನಾಟಕ ಸರ್ಕಾರ

ಸಂಖ್ಯೆ: ಬಿ6/ ಎಸ್‌ಸಿಪಿ/ಟಿಎಸ್‌ಪಿ/ ಸಿಆರ್-5 /2018-19

ಅಪರ ಪ್ರಧಾನ ಮುಖ್ಯಅರಣ್ಯ ಸಂರಕ್ಷಣಾಧಿಕಾರಿ
(ಅಭಿವೃದ್ಧಿ) ಯವರಕಛೇರಿ,
ಅರಣ್ಯ ಭವನ ಮಲ್ಲೇಶ್ವರಂ,
ಬೆಂಗಳೂರು-3 ದಿನಾಂಕ: 19-09-2018.

ಇವರಿಗೆ,

ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.

ವಿಷಯ:- ಕರ್ನಾಟಕ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ನಿಯಮಗಳು 2017ನ್ನು ಕಳುಹಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಕಇ 75 ಎಸ್‌ಎಲ್‌ಪಿ 2014 ದಿನಾಂಕ: 20-3-2014 ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಎಸ್‌ಡಬ್ಲ್ಯೂಡಿ 167 ಎಸ್‌ಎಲ್‌ಪಿ 2017 (ಪಿ1) ಬೆಂಗಳೂರು ದಿನಾಂಕ:8-11-2017, ಕರ್ನಾಟಕ ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆ (ಯೋಜನೆ ರೂಪಿಸುವುದು,ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ನಿಯಮಗಳು, 2017.

* * * * *

ಉಲ್ಲೇಖ (1)ರ ಅಧಿಸೂಚನೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಅಭಿವೃದ್ಧಿಗಾಗಿ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ನಿಯಮಗಳನ್ನು ಹೊರಡಿಸಿರುತ್ತದೆ. ಪ್ರಸ್ತುತ ಕೆಲವು ಮಾರ್ಪಾಡುಗಳೊಂದಿಗೆ ಸದರಿ ನಿಯಮಗಳನ್ನು ಉಲ್ಲೇಖ (2) ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ. ಈ ಅಧಿಸೂಚನೆಯ ಪ್ರತಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸಿ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅಭಿವೃದ್ಧಿ), ಬೆಂಗಳೂರು.

E:\2018\B6\SCP-TSP 2018-19\Kan Ltr.docx

## ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

### ತಿದ್ದುಪಡಿ

**ಸಂಖ್ಯೆ: ಪಸಂಮೀ 62 ಮೀಇಸೇ 2018, ಬೆಂಗಳೂರು, ದಿನಾಂಕ: 21.04.2018.**

ಅಧಿಸೂಚನೆ ಸಂಖ್ಯೆ: ಪಸಂಮೀ/181/ಮೀಇಸೇ/2017, ದಿನಾಂಕ: 01-01-2018ರ ಮೀನುಗಾರಿಕೆ ಜಂಟಿ ನಿರ್ದೇಶಕರ ವೃಂದದಲ್ಲಿ ಶ್ರೀ ದೇವರಾಜ್‌ಯಾದವ್, ಮೀನುಗಾರಿಕೆ ಜಂಟಿ ನಿರ್ದೇಶಕರು ಇವರ ಜನ್ಮ ದಿನಾಂಕ: 06-06-1958 ಎಂಬುದರ ಬದಲಾಗಿ ದಿನಾಂಕ: 01-06-1958 ಎಂದು ವಯೋನಿವೃತ್ತಿ ದಿನಾಂಕ: 30-06-2018 ಎಂಬುದರ ಬದಲಾಗಿ ದಿನಾಂಕ: 31-05-2018 ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

PR – 563

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರಶ್ಮಿ ಶಿವಶಂಕರ ಪೋಳ
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
(ಮೀನುಗಾರಿಕೆ)

## REVENUE SECRETARIAT

### CORRIGENDUM

**No. RD 02 GRC 2015, BENGALURU, DATED: 02.04.2018.**

In the even number notification dated: 29.01.2018 instead of Assistant Commissioner Bengaluru North Sub-Division, Bengaluru District as Competent Authority Under Section 3 of the provisions of the Act. The following phrases are inserted and shall be read as below:-

The Government in exercise of the powers conferred under Section 3 of the Karnataka Protection of interest of Depositors in Financial Establishments Act, 2004 (Karnataka Act 30 of 2005) hereby appoints Deputy Commissioner, Bengaluru Urban District, Bengalure as the competent Authority to carry out the purposes of this Act and shall have all powers to take appropriate action on behalf of the Government under the provisions of this Act in respect of M/s Shri shakthi Souhardha Limited & Shri A.N. Kumar, President of Kumar Logistics with immediate effect.

PR. 558

SC.50

By Order and in the name of the Governor of Karnataka
K.R. RAVIKUMAR
Under Secretary to Government,
Revenue Department (Special Cell)

## ಸಮಾಜ ಕಲ್ಯಾಣ ಸಚಿವಾಲಯ

### ಅಧಿಸೂಚನೆ

**ಸಂ. ಎಸ್‌ಡಬ್ಲ್ಯೂಡಿ 167 ಎಸ್‌ಎಲ್‌ಪಿ 2017 (ಪಿ1), ಬೆಂಗಳೂರು, ದಿನಾಂಕ: 08.11.2017.**

ಕರ್ನಾಟಕ ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ನಿಯಮಗಳು, 2017

ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013ರ (2013ರ ಕರ್ನಾಟಕ ಅಧಿನಿಯಮ 65, ಮೂಲ ಅಧಿನಿಯಮ ಮತ್ತು ತಿದ್ದುಪಡಿ ಅಧಿನಿಯಮ, 2017)ರ 27ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರೂಪಿಸಲು ಉದ್ದೇಶಿಸಿರುವ ಕರ್ನಾಟಕ ಅನುಸೂಚಿತ ಜಾತಿಗಳ ಉಪ-ಹಂಚಿಕೆ ಹಾಗೂ ಬುಡಕಟ್ಟು ಉಪ-ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಹಾಗೂ ಬಳಕೆ) ನಿಯಮಗಳು, 2017ರ ಕರಡನ್ನು, ಸರ್ಕಾರಿ ರಾಜ್ಯಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಹಾಗೂ ಸಲಹೆಗಳನ್ನು ಆಹ್ವಾನಿಸಿ, ಅಧಿಸೂಚನೆ ಸಂ. ಎಸ್‌ಡಬ್ಲ್ಯೂಡಿ 167 ಎಸ್‌ಎಲ್‌ಪಿ 2017 (ಪಿ1), ಬೆಂಗಳೂರು, ದಿನಾಂಕ : 02.08.2017 ರಲ್ಲಿ ಪ್ರಕಟಿಸಲಾಗಿದೆ.

ಮತ್ತು ರಾಜ್ಯಪತ್ರವನ್ನು 02.08.2017 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸ್ವೀಕರಿಸದೆ ಇರುವುದರಿಂದ;

ಈಗ, ಆದ್ದರಿಂದ ಕರ್ನಾಟಕ ಅನುಸೂಚಿತ ಜಾತಿಗಳ ಉಪ-ಹಂಚಿಕೆ ಹಾಗೂ ಬುಡಕಟ್ಟು ಉಪ-ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಹಾಗೂ ಬಳಕೆ) ಅಧಿನಿಯಮ, 2013 (2013ರ ಕರ್ನಾಟಕ ಅಧಿನಿಯಮ 65-ಮೂಲ ಅಧಿನಿಯಮ ಮತ್ತು ತಿದ್ದುಪಡಿ ಅಧಿನಿಯಮ, 2017)ರ 27ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ .–

(1) ಈ ನಿಯಮಗಳನ್ನು ಕರ್ನಾಟಕ ಅನುಸೂಚಿತ ಜಾತಿಗಳ ಉಪ–ಹಂಚಿಕೆ ಹಾಗೂ ಬುಡಕಟ್ಟು ಉಪ–ಹಂಚಿಕೆ (ಯೋಜನೆಯನ್ನು ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ನಿಯಮಗಳು, 2017 ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು :

(1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(ಎ) "ಅಧಿನಿಯಮ" ಎಂದರೆ, ಕರ್ನಾಟಕ ಅನುಸೂಚಿತ ಜಾತಿಗಳ ಉಪ–ಯೋಜನೆ ಹಾಗೂ ಬುಡಕಟ್ಟು ಉಪ–ಯೋಜನೆ(ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013 (2013ರ ಕರ್ನಾಟಕ ಅಧಿನಿಯಮ 65) ಮತ್ತು ತಿದ್ದುಪಡಿ ಅಧಿನಿಯಮ, 2017

(ಬಿ) "ಹಂಚಬಹುದಾದ ಬಜೆಟ್" ಎಂದರೆ, ವಿನಾಯಿತಿ ಕೊಡಲಾದ ವೆಚ್ಚಗಳನ್ನು ಹೊರತುಪಡಿಸಿ ರಾಜ್ಯದ ಸಂಚಿತ ನಿಧಿಯಲ್ಲಿನ ಒಟ್ಟು ವೆಚ್ಚ.

(ಸಿ) "ಜನಗಣತಿ" ಎಂದರೆ, ಜನಗಣತಿ ಅಧಿನಿಯಮ, 1948ರ ಮೇರೆಗೆ ಭಾರತ ಸರ್ಕಾರವು ನಡೆಸಿದ ಜನಗಣತಿ.

(ಡಿ) 'ವಿನಾಯಿತಿ ನೀಡಿದ ವೆಚ್ಚ' ಎಂದರೆ, ಈ ಅಧಿನಿಯಮದ ಅನ್ವಯತೆಯಿಂದ ವಿನಾಯಿತಿ ನೀಡಿದ ವೆಚ್ಚ ಹಾಗೂ ವೇತನ, ವೇತನ ಸಹಾಯಾನುದಾನ, ಪಿಂಚಣಿ, ಆಡಳಿತಾತ್ಮಕ ವೆಚ್ಚ, ರಾಜ್ಯ ಸರ್ಕಾರದ ಸ್ವಂತ ಸಾಲಗಳ ಕಾರಣದಿಂದಾಗಿ ಅಸಲು ಸಂದಾಯ ಹಾಗೂ ಬಡ್ಡಿ ಸಂದಾಯ ಮತ್ತು ರಾಜ್ಯ ಸರ್ಕಾರಿ ಉದ್ಯಮಗಳಿಂದ ಬಜೆಟ್ ಹೊರತಾದ ಸಾಲಗಳು ಮತ್ತು ಸರ್ಕಾರದಿಂದ ಅಧಿಸೂಚಿಸಲಾದ ಆಡಳಿತಾತ್ಮಕ ಸ್ವರೂಪದ ಯಾವುದೇ ಇತರ ವೆಚ್ಚವನ್ನು ಒಳಗೊಳ್ಳುತ್ತದೆ.

(ಇ) 'ನಮೂನೆ' ಎಂದರೆ ಈ ನಿಯಮಗಳಿಗೆ ಸೇರಿಸಲಾದ ನಮೂನೆ.

(ಎಫ್) "ಸ್ಕೀಮ್‌ಗಳು" ಎಂದರೆ, ಅಧಿನಿಯಮದ 2ನೇ ಪ್ರಕರಣದ (ಕೆ) ಉಪ–ಪ್ರಕರಣದಲ್ಲಿ ಪರಿಭಾಷಿಸಿದಂತೆ ಅನುಸೂಚಿತ ಜಾತಿಗಳ ಉಪ–ಹಂಚಿಕೆ ಅಥವಾ ಬುಡಕಟ್ಟು ಉಪ–ಹಂಚಿಕೆ ಸ್ಕೀಮ್‌ಗಳು ಮತ್ತು ಅನುಸೂಚಿತ ಜಾತಿಗಳ ಉಪ–ಹಂಚಿಕೆ ಅಥವಾ ಬುಡಕಟ್ಟು ಉಪ–ಹಂಚಿಕೆಯಲ್ಲಿ ಸೇರಿಸಬೇಕೆಂದು ಪ್ರಸ್ತಾಪಿಸಿರುವ ಅಂಥ ಸ್ಕೀಮ್‌ಗಳನ್ನು ಸಹ ಒಳಗೊಳ್ಳುತ್ತವೆ.

(ಜಿ) "ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳ ನಿವಾಸ" ಎಂದರೆ, ಈ ನಿಯಮಗಳಲ್ಲಿ ಈ ಕೆಳಗೆ ವಿವರಿಸಿರುವಂತೆ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳ ಜನಸಂಖ್ಯೆ ಇರುವಲ್ಲಿ ಅಥವಾ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಬುಡಕಟ್ಟುಗಳ ಜನಸಂಖ್ಯೆ ಸಂಯೋಜಿತಗೊಂಡಿರುವಲ್ಲಿ ಆ ಗ್ರಾಮದ ಒಟ್ಟು ಜನಸಂಖ್ಯೆಗೆ ಹೋಲಿಸಿದಾಗ ಅತಿ ಹೆಚ್ಚಿನ ಶೇಕಡವಾರು ಜನಸಂಖ್ಯೆ ಇರುವ ಯಾವುದೇ ನಿವಾಸ.

(2) ಈ ನಿಯಮಗಳಲ್ಲಿ ಬಳಸಲಾದ ಆದರೆ ಪರಿಭಾಷಿಸಿಲ್ಲದ ಪದಗಳು, ಪದಾವಳಿಗಳು ಅಧಿನಿಯಮದಲ್ಲಿ ಅವುಗಳಿಗೆ ನೀಡಿದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

3. ಈ ಮುಂದೆ ಸಮುದಾಯ/ ನಿವಾಸ ಅಭಿವೃದ್ಧಿ ಸ್ಕೀಮ್‌ಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಬುಡಕಟ್ಟುಗಳನ್ನು ಆಯ್ಕೆ ಮಾಡುವುದು:

(1) ಶೇಕಡ 75ಕ್ಕಿಂತಲೂ ಹೆಚ್ಚಿರುವ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳು ಅಥವಾ ಸಂಯೋಜಿತ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಹೊಂದಿರುವ ನಿವಾಸಗಳು.

(2) ಶೇಕಡ 50ಕ್ಕಿಂತಲೂ ಹೆಚ್ಚಿದ್ದು ಶೇಕಡ 75ರ ವರೆಗಿನ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳು ಅಥವಾ ಸಂಯೋಜಿತ ಅನುಸೂಚಿತ ಜಾತಿಗಳು/ ಅನುಸೂಚಿತ ಬುಡಕಟ್ಟುಗಳು ಹೊಂದಿರುವ ನಿವಾಸಗಳು.

(3) ಶೇಕಡ 50ಕ್ಕಿಂತಲೂ ಕಡಿಮೆ ಇರುವ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳು ಅಥವಾ ಸಂಯೋಜಿತ ಅನುಸೂಚಿತ ಜಾತಿಗಳು/ ಅನುಸೂಚಿತ ಬುಡಕಟ್ಟುಗಳು ಹೊಂದಿರುವ ನಿವಾಸಗಳು.

4. ಅಧಿನಿಯಮದ (2)ನೇ ಪ್ರಕರಣದ ಮೇರೆಗೆ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಅಂತರವನ್ನು ನಿರ್ಧರಿಸುವುದು.

(1) ನೋಡಲ್ ಇಲಾಖೆಯು, ಸಾಮಾನ್ಯ ಜನಸಂಖ್ಯೆಯ ರಾಜ್ಯ ಸರಾಸರಿಗೆ ಎದುರಾಗಿ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಬುಡಕಟ್ಟುಗಳ ಅಭಿವೃದ್ಧಿಯ ಮಟ್ಟದಲ್ಲಿನ ಅಂತರವನ್ನು ಹಾಗೂ ಅಧಿಕೃತ ಸಮೀಕ್ಷಾ ವರದಿಗಳ ಮೂಲಗಳಿಂದ/ ಅಧ್ಯಯನಗಳ ಪ್ರಭಾವದಿಂದ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪ್ರಕಟಣೆಗಳಿಂದ ಮತ್ತು ಅದರ ಏಜೆನ್ಸಿಗಳಿಂದ ಹಾಗೂ ಸಂಬಂಧಪಟ್ಟ ಇತರ ಸಾಧನಗಳಿಂದ ದೊರಕಬಹುದಾದ ಆಧುನಿಕ ದತ್ತಾಂಶಗಳ ಆಧಾರದ ಮೇಲೆ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ವ್ಯಾಪ್ತಿಯೊಳಗಿನ ಅಂತರವನ್ನು ಗುರುತಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಮತ್ತಷ್ಟು ಆಧಾರಾಂಶಗಳನ್ನು ಈ ಮುಂದಿನದನ್ನು ಒಳಗೊಂಡ ಮುಖ್ಯ ಸೂಚಕಗಳ ಮೇಲೆ ಕಾಲದಿಂದ ಕಾಲಕ್ಕೆ ಜನಗಣತಿ ಆಧಾರದ ಮೇಲೆ ನಿರ್ಮಿಸತಕ್ಕದ್ದು.

ಎ) ಜನಾಂಗ ಸ್ಥಿತಿ ವಿವರಣಾ ಸೂಚಕಗಳು

ಬಿ) ಆರೋಗ್ಯಕ್ಕೆ ಸಂಬಂಧಪಟ್ಟ ಸೂಚಕಗಳು

ಸಿ) ಶಿಕ್ಷಣಕ್ಕೆ ಸಂಬಂಧಪಟ್ಟ ಸೂಚಕಗಳು

ಡಿ) ವಸತಿ ಮತ್ತು ನೈರ್ಮಲ್ಯ

ಇ) ಮೂಲಭೂತ ಸೌಲಭ್ಯಗಳು

ಎಫ್) ಆರ್ಥಿಕಾಭಿವೃದ್ಧಿ ಸೂಚಕಗಳು ಮತ್ತು ದಾರಿದ್ರ್ಯದ ಮಟ್ಟ

(2) ಪ್ರತಿಯೊಂದು ಇಲಾಖೆಯು, ಸಾಮಾನ್ಯ ಜನಸಂಖ್ಯೆಯ ಪ್ರತಿಯಾಗಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಅದರ ಆಜ್ಞಾಪನೆ ಹಾಗೂ ಚಟುವಟಿಕೆಗಳಲ್ಲಿ ಅಂತರವನ್ನು ಗುರುತಿಸತಕ್ಕದ್ದು ಮತ್ತು ಯೋಜನೆಗಳನ್ನು ರೂಪಿಸತಕ್ಕದ್ದು. ತದನುಸಾರವಾಗಿ ರಾಜ್ಯ ಯೋಜನಾ ಆದ್ಯತೆಯಲ್ಲಿ ಅನುಸೂಚಿತ ಜಾತಿಗಳ ಉಪ–ಹಂಚಿಕೆ ಹಾಗೂ ಅನುಸೂಚಿತ ಪಂಗಡಗಳ ಉಪ–ಹಂಚಿಕೆ ಸ್ಕೀಮ್‌ಗಳನ್ನು ಸಿದ್ಧಪಡಿಸತಕ್ಕದ್ದು. ಗುರುತಿಸಲಾದ ಅಭಿವೃದ್ಧಿ ಅಂತರವನ್ನು ನೋಡಲ್ ಇಲಾಖೆಗೆ ತಿಳಿಯಪಡಿಸತಕ್ಕದ್ದು.

(3) ನೋಡಲ್ ಇಲಾಖೆಯು, ಅಭಿವೃದ್ಧಿಯಲ್ಲಿ ಅಸ್ತಿತ್ವದಲ್ಲಿರುವ ಅಂತರದ ಮಟ್ಟ, ಸ್ವರೂಪ ಹಾಗೂ ಅಗತ್ಯ ಪರಿಮಾಣಕ್ಕೆ ಸಂಬಂಧಿಸಿದ ಅನುಸೂಚಿತ ಜಾತಿಗಳ ಉಪ–ಹಂಚಿಕೆ ಹಾಗೂ ಬುಡಕಟ್ಟು ಉಪ–ಹಂಚಿಕೆ ಮೇರೆಗೆ ಅನುಷ್ಠಾನಗೊಂಡ ಪ್ರತಿಯೊಂದು ಸ್ಕೀಮಿನ ಪ್ರಭಾವವನ್ನು ಮೌಲ್ಯಮಾಪನ ಮಾಡಲು ಭಾವಿತ ಏಜೆನ್ಸಿಯಿಂದ ಅಥವಾ ಸಂಶೋಧನಾ ಸಂಸ್ಥೆಗಳ ಮೂಲಕ ಕಾಲದಿಂದ ಕಾಲಕ್ಕೆ ವಲಯ ಆಧಾರಿತ ಮೌಲ್ಯೀಕರಣ/ ಸಂಶೋಧನಾ ಅಧ್ಯಯನಗಳನ್ನು ಸಹ ಕಾರ್ಯರೂಪಕ್ಕೆ ತರತಕ್ಕದ್ದು.

(4) ನೋಡಲ್ ಇಲಾಖೆಯು, ಸಂಗ್ರಹಿಸಲಾದ ದತ್ತಾಂಶದ ಆಧಾರದ ಮೇಲೆ, ಅಭಿವೃದ್ಧಿಯಲ್ಲಿರುವ ಅಂತರದ ಮೇಲಿನ ವರದಿಯನ್ನು ಸಿದ್ಧಪಡಿಸಿ, ಯುಕ್ತ ನೀತಿ ಹಾಗೂ ಆಡಳಿತಾತ್ಮಕ ಕ್ರಮಗಳಿಗಾಗಿ ಗುರುತಿಸಲಾದ ಅಂತರವನ್ನು ತುಂಬಲು, ನೋಡಲ್ ಏಜೆನ್ಸಿ ಮತ್ತು ರಾಜ್ಯ ವಿಧಾನ ಪರಿಷತ್ತಿನ ಮುಂದೆ ಮಂಡಿಸತಕ್ಕದ್ದು.

5. ರಾಜ್ಯ ಪರಿಷತ್ತಿನ ಸಭೆಗಳು ಹಾಗೂ ಇತರ ಪ್ರಕಾರ್ಯಗಳು (ಪ್ರಕರಣ3(6))

(1) ಪರಿಷತ್ತಿನ ಅಧ್ಯಕ್ಷರು ನಿರ್ಧರಿಸಿರುವ ಸ್ಥಳ ಮತ್ತು ಸಮಯದಲ್ಲಿ ರಾಜ್ಯ ಪರಿಷತ್ತು ವರ್ಷಕ್ಕೆ ಎರಡು ಬಾರಿ ಸಭೆ ಸೇರತಕ್ಕದ್ದು.

(2) ಪ್ರಸಕ್ತ ವರ್ಷಕ್ಕಾಗಿ, ನೋಡಲ್ ಏಜೆನ್ಸಿಯ ಶಿಫಾರಸ್ಸಿನ ಮೇಲೆ ಉಪ–ಹಂಚಿಕೆಗಳ ಮೇರೆಗೆ ಇಲಾಖೆಗಳ ವಾರ್ಷಿಕ ಕಾರ್ಯಯೋಜನೆಗಳ ಅಂತಿಮ ಅನುಮೋದನೆಯನ್ನು ನೀಡಲು ರಾಜ್ಯ ಪರಿಷತ್ತು ಸಭೆ ಸೇರತಕ್ಕದ್ದು ಮತ್ತು ಎಲ್ಲಾ ಇಲಾಖೆಗಳ ಕಾರ್ಯಸಾಧನೆಯ ಪುನರಾವಲೋಕನವನ್ನು ನಡೆಸತಕ್ಕದ್ದು.

(3) ರಾಜ್ಯ ಪರಿಷತ್ತು ಅನುಮೋದಿಸಿರುವಂತೆ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಯೋಜನೆಗಳು ಹಣಕಾಸು ಇಲಾಖೆಯಿಂದ ಹಣಕಾಸು ಸಹಮತಿಯನ್ನು ಒಪ್ಪಲಾಗಿದೆ ಎಂದು ಭಾವಿಸತಕ್ಕದ್ದು ಹಾಗೂ ರಾಜ್ಯ ಪರಿಷತ್ತಿನ ಅನುಮೋದನೆಗಳನ್ನು ಸ್ವೀಕರಿಸಿದ ತತ್‌ಕ್ಷಣದಲ್ಲೇ ಸಂಬಂಧಪಟ್ಟ ಇಲಾಖೆಗಳು ಆಡಳಿತ ಅನುಮೋದನೆಗಳನ್ನು ಹೊರಡಿಸತಕ್ಕದ್ದು.

6. ರಾಜ್ಯ ಪರಿಷತ್ತಿನ ಸದಸ್ಯರುಗಳ ನಾಮನಿರ್ದೇಶನ ಹಾಗೂ ತೆಗೆದುಹಾಕುವುದು ಮತ್ತು ಅವರ ಭತ್ಯೆಗಳು.

(1) ಸರ್ಕಾರವು, ಅನುಸೂಚಿತ ಜಾತಿ/ ಅನುಸೂಚಿತ ಪಂಗಡಕ್ಕೆ ಸೇರಿದ ಕರ್ನಾಟಕದಿಂದ, ರಾಜ್ಯ ವಿಧಾನ ಸಭೆ, ವಿಧಾನ ಪರಿಷತ್ತು ಮತ್ತು ಸಂಸತ್ತಿನ ಸದಸ್ಯರಿಂದ ಆಯ್ದ ಐದು ಜನ ಸದಸ್ಯರನ್ನು ರಾಜ್ಯ ಪರಿಷತ್ತಿಗೆ 30 ತಿಂಗಳುಗಳ ಅವಧಿಗಾಗಿ ನಾಮನಿರ್ದೇಶಿಸಬಹುದು.

(2) ನಾಮನಿರ್ದೇಶಿತ ವ್ಯಕ್ತಿಯು, ಸಂಸತ್ತಿನ ಸದಸ್ಯನಾಗಿ ವಿಧಾನಸಭೆಯ ಸದಸ್ಯನಾಗಿ ಅಥವಾ ಸಂದರ್ಭಾನುಸಾರ ವಿಧಾನ ಪರಿಷತ್ತಿನ ಸದಸ್ಯನಾಗಿ ಮುಂದುವರೆಯಲು ಅವಕಾಶವಿಲ್ಲದಿದ್ದರೆ ಅವರು ಸದಸ್ಯರಾಗಿರುವುದು ನಿಂತು ಹೋಗಬಹುದು.

(3) ನಾಮನಿರ್ದೇಶಿತ ಸದಸ್ಯರುಗಳು, ಅವರು ರಾಜ್ಯ ಪರಿಷತ್ತಿನ ಸಭೆಗಳಲ್ಲಿ ಭಾಗವಹಿಸಿರುವಾಗ ರಾಜ್ಯ ಪರಿಷತ್ತಿನ ಸಮಿತಿಗಳ ಸದಸ್ಯರುಗಳಿಗೆ ನೀಡಬಹುದಾದ ಪ್ರಯಾಣ ಭತ್ಯೆ ಹಾಗೂ ಉಪವೇಶನ ಶುಲ್ಕಗಳಿಗೆ ಹಕ್ಕುಳ್ಳವರಾಗಿರುತ್ತಾರೆ.

(4) ರಾಜ್ಯ ಪರಿಷತ್ತಿನಲ್ಲಿ ನಾಮನಿರ್ದೇಶಿತ ಸದಸ್ಯರುಗಳ ಸದಸ್ಯತ್ವವು 30 ತಿಂಗಳುಗಳು ಮುಗಿದ ತರುವಾಯ ಅಥವಾ ಸರ್ಕಾರವು ಹೊಸದಾಗಿ ನಾಮನಿರ್ದೇಶನ ಮಾಡುವುದು ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಗೆ ಮುಕ್ತಾಯವಾಗತಕ್ಕದ್ದು.

7. 13ನೇ ಪ್ರಕರಣದ ಮೇರೆಗೆ ರಾಜ್ಯದ ಹಂಚಿಕೆ ಮಾಡಬೇಕಾದ ಆಯವ್ಯಯದಿಂದ ಅನುಸೂಚಿತ ಜಾತಿ ಉಪ–ಹಂಚಿಕೆ ಮತ್ತು ಬುಡಕಟ್ಟು ಉಪ–ಹಂಚಿಕೆಗಾಗಿ ನಿಧಿಗಳನ್ನು ಮೀಸಲಿರಿಸುವುದು.

(1) ಹಂಚಿಕೆ ಮಾಡಬೇಕಾದ ಒಟ್ಟು ಆಯವ್ಯಯದಲ್ಲಿ,ಅನುಸೂಚಿತ ಜಾತಿಗಳ ಉಪ–ಹಂಚಿಕೆ ಹಾಗೂ ಬುಡಕಟ್ಟುಗಳ ಉಪ–ಹಂಚಿಕೆಯು ಇತ್ತೀಚಿನ ಜನಗಣತಿಯ ಪ್ರಕಾರ ರಾಜ್ಯದಲ್ಲಿರುವ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆಯ ಪ್ರಮಾಣಾನುಸಾರಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

(2) ಹಣಕಾಸು ಇಲಾಖೆಯು, ವಿವಿಧ ಇಲಾಖೆಗಳಿಗೆ ಹೆಚ್ಚುವರಿ ಹಂಚಿಕೆ ಮಾಡುವುದಕ್ಕಾಗಿ ನೋಡಲ್ ಏಜೆನ್ಸಿ ಹಾಗೂ ನೋಡಲ್ ಇಲಾಖೆಯನ್ನು ಸಮರ್ಥಗೊಳಿಸಲು ಹಿಂದಿನ ಹಣಕಾಸು ವರ್ಷದ ನಿಕಟಪೂರ್ವ ಹಣಕಾಸು ವರ್ಷದಲ್ಲಿ ಮಾಡಲಾದ ಹಂಚಿಕೆಯ ಪೈಕಿ ಖರ್ಚು ಮಾಡಿದ ಮೊತ್ತ ಯಾವುದಾದರೂ ಇದ್ದರೆ, ಅದರ ಜೊತೆಗೆ ಹಂಚಿಕೆ ಮಾಡಬೇಕಾದ ಆಯವ್ಯಯವನ್ನು ಅಂತಿಮಗೊಳಿಸಿದ ತರುವಾಯ ಅಂತಿಮ ಹಂಚಿಕೆಗೆ ಒಳಪಟ್ಟು, ಪ್ರತಿಯೊಂದು ಹಣಕಾಸು ವರ್ಷದಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿಯ ತಾತ್ಕಾಲಿಕ ಇಡಿಗಂಟಿನ ಹಂಚಿಕೆಯನ್ನು ನೋಡಲ್ ಇಲಾಖೆಗೆ ತಿಳಿಸತಕ್ಕದ್ದು. ತಾತ್ಕಾಲಿಕ ಇಡಿಗಂಟಿನ ಹಂಚಿಕೆಯನ್ನು ತಿಳಿಸುವಾಗ ಖರ್ಚು ಮಾಡಿರದ ಮೊತ್ತವನ್ನು ಪ್ರತ್ಯೇಕವಾಗಿ ತಿಳಿಸಬೇಕಾಗುತ್ತದೆ.

(3) ಖರ್ಚಾಗದ ಮೊತ್ತದ ಪೈಕಿ, $^{2}/_{3}$ ರಷ್ಟು ಮೊಬಲಗನ್ನು ಅದೇ ಇಲಾಖೆಗೆ ಹಂಚಿಕೆ ಮಾಡಬೇಕು ಮತ್ತು ವಿವಿಧ ಯೋಜನೆಗಳಿಗಾಗಿ ಉಪಯೋಗಿಸಲು ಉಳಿದ 1/3 ರಷ್ಟನ್ನು ಪ್ರತ್ಯೇಕ ಲೆಕ್ಕಶೀರ್ಷಿಕೆಯ ಅಡಿಯಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಹಂಚಿಕೆ ಮಾಡಬೇಕು. ಅದರ ನಂತರ ಖರ್ಚು ಮಾಡಿದ ಮೊತ್ತವನ್ನು ಆ ವರ್ಷದ ನಂತರ ಮುಂದುವರಿಸಲಾಗದಿರುವುದರಿಂದ, ಅದನ್ನು ಪ್ರಸಕ್ತ ವರ್ಷದಲ್ಲೇ ಆದ್ಯತೆಯ ಆಧಾರದ ಮೇಲೆ ಸಂಪೂರ್ಣವಾಗಿ ಬಳಸಿಕೊಳ್ಳಬೇಕು.

8. 14ನೇ ಪ್ರಕರಣದ ಮೇರೆಗೆ ನೋಡಲ್ ಇಲಾಖೆಯ ಮೂಲಕ ವಿವಿಧ ಇಲಾಖೆಗಳಿಗೆ ಉಪ ಹಂಚಿಕೆಯ ಬಗ್ಗೆ ತಿಳಿಸಬೇಕಾದ ವಿಧಾನ.

(1) ಹಣಕಾಸು ಇಲಾಖೆಯಿಂದ ಹಂಚಿಕೆಯನ್ನು ಪಡೆದ ತರುವಾಯ ನೋಡಲ್ ಇಲಾಖೆಯು ಅನುಕ್ರಮವಾಗಿ, ಅಭಿವೃದ್ಧಿಯ ಅಂತರವನ್ನು ಮತ್ತು ಗುರುತಿಸಲಾದ ಅಂತರವನ್ನು ಕಡಿಮೆ ಮಾಡುವ ಹಾಗೂ ನಿವಾರಿಸುವ ಅಗತ್ಯತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನಾ ಇಲಾಖೆ ಮತ್ತು ಅನುಷ್ಠಾನ ಇಲಾಖೆಗಳ ಸಹಯೋಗದೊಂದಿಗೆ ಅನುಸೂಚಿತ ಜಾತಿಗಳ ಉಪ-ಹಂಚಿಕೆ ಹಾಗೂ ಬುಡಕಟ್ಟು ಉಪ-ಹಂಚಿಕೆ ಅಡಿಯಲ್ಲಿ ಪ್ರತಿಯೊಂದು ಇಲಾಖೆಗೆ ಯೋಜನಾವಾರು ಹಂಚಿಕೆಯನ್ನು ಸೂಚಿಸತಕ್ಕದ್ದು. ನೋಡಲ್ ಇಲಾಖೆಯು, ಇದನ್ನು ಸೂಚಿಸುವ ಮುಂಚೆ ನೋಡಲ್ ಏಜೆನ್ಸಿಯ ಅನುಮೋದನೆಯನ್ನು ಪಡೆಯತಕ್ಕದ್ದು.

(2) ನೋಡಲ್ ಇಲಾಖೆ ಹಾಗೂ ನೋಡಲ್ ಏಜೆನ್ಸಿಯು, ಅನುಷ್ಠಾನ ಇಲಾಖೆಗಳಿಗೆ ಹಂಚಿಕೆಯನ್ನು ಮಾಡುವಾಗ, ಈ ಮುಂದಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು.

(ಎ) ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನಾ ಘಟಕಗಳು ರಾಜ್ಯದ ಒಟ್ಟು ಆದ್ಯತೆಯನ್ನು ಹಾಗೂ ಯೋಜನೆಯು ಒಳಗೊಂಡ ಪ್ರಯೋಜನಗಳ ಪ್ರಮಾಣ ಮತ್ತು ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಫಲಾನುಭವಿಗಳ ಸಂಖ್ಯೆಯನ್ನು ಪ್ರತಿಬಿಂಬಿಸಬೇಕು.

(ಬಿ) ಇಲಾಖೆಗಳ ಯೋಜನೆಗಳು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ವ್ಯಕ್ತಿಗಳಿಗೆ, ಕುಟುಂಬಗಳಿಗೆ, ಸಾಮಾಜಿಕ ಗುಂಪುಗಳಿಗೆ, ವಾಸ ಸ್ಥಳಗಳಿಗೆ ಹಾಗೂ ಸಂಸ್ಥೆಗಳಿಗೆ ಪ್ರತ್ಯೇಕವಾಗಿ ನೇರ ಮತ್ತು ಪರಿಮಾಣಾತ್ಮಕ ಪ್ರಯೋಜನಗಳನ್ನು ಒದಗಿಸಬೇಕು.

(ಸಿ) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಲ್ಲಿನ ಅತ್ಯಂತ ಹಿಂದುಳಿದ ಸಮುದಾಯಗಳು ಹಾಗೂ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಜನಸಂಖ್ಯೆಯು ವಿಪುಲವಾಗಿರುವ ಪ್ರದೇಶದಲ್ಲಿರುವ ಅಂಥ ಸಮುದಾಯಗಳು ಮತ್ತು ಪ್ರದೇಶಗಳ ಸಮಾನತೆ ಮತ್ತು ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಬೇಕಾದ ಅಗತ್ಯ ಕ್ರಮಗಳು. ನೋಡಲ್ ಇಲಾಖೆಯು, ಅಂಥ ಪ್ರದೇಶಗಳನ್ನು, ಅತ್ಯಂತ ಹಿಂದುಳಿದ ಸಾಮಾಜಿಕ ಗುಂಪುಗಳನ್ನು ಗುರುತಿಸತಕ್ಕದ್ದು ಹಾಗೂ ಅದನ್ನು ಸಂಬಂಧಪಟ್ಟ ಇಲಾಖೆಗಳಿಗೆ ತಿಳಿಸತಕ್ಕದ್ದು.

(ಡಿ) ಅಭಿವೃದ್ಧಿಯ ಮತ್ತು ಉಪ-ಹಂಚಿಕೆಗಳ ಅಡಿಯಲ್ಲಿ ಹಂಚಿಕೆ ಮಾಡಲಾದ ನಿಧಿಗಳ ಬಳಕೆಯ ಪ್ರಮಾಣದ ಅಂತರವನ್ನು ತಗ್ಗಿಸುವಲ್ಲಿನ ಪರಿಮಾಣಾತ್ಮಕ ಫಲಿತಾಂಶ ಹಾಗೂ ಸಾಮರ್ಥ್ಯ ಆಧಾರದ ಮೇಲೆ ನಿರ್ಧರಿಸಲಾದಂಥ ಹಿಂದಿನ ಹಣಕಾಸು-ವರ್ಷದಲ್ಲಿನ ಇಲಾಖೆಗಳ ಕಾರ್ಯನಿರ್ವಹಣೆಯು ಪಾರದರ್ಶಕ ಹಾಗೂ ಉತ್ತರದಾಯಿತ್ವದ ರೀತಿಯಲ್ಲಿರಬೇಕು.

(ಇ) ಯಾವುದೇ ಅಪೂರ್ಣ ಯೋಜನೆಗಳನ್ನು/ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ಬೇಕಾಗುವ ನಿಧಿಗಳು.

(ಎಫ್) ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಜನಸಂಖ್ಯೆಯ ಪ್ರಮಾಣಕ್ಕಿಂತ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಅಭಿವೃದ್ಧಿಯಲ್ಲಿ ಕಂಡುಬರುವ ಅಗತ್ಯತೆ ಹಾಗೂ ಅವಶ್ಯಕತೆಯ ಆಧಾರದ ಮೇಲೆ ಪ್ರತಿಯೊಂದು ಯೋಜನೆಗೆ ನಿಧಿಗಳನ್ನು ಹಂಚಿಕೆ ಮಾಡತಕ್ಕದ್ದು. ಒಂದೇ ಇಲಾಖೆಯಲ್ಲಿ ಒಂದು ಯೋಜನೆಗೆ ಹೆಚ್ಚಿನ ಹಂಚಿಕೆ ಮತ್ತು ಇನ್ನೊಂದು ಯೋಜನೆಗೆ ಕಡಿಮೆ ಹಂಚಿಕೆ ಇರಬಹುದು.

9. 15 ಮತ್ತು 17ನೇ ಪ್ರಕರಣದ ಮೇರೆಗೆ ಇಲಾಖೆಗಳು, ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆಯಲ್ಲಿ ಸೇರಿಸಬೇಕಾದ ಯೋಜನೆಗಳನ್ನು ಗುರುತಿಸುವುದು.

(1) ಪ್ರತಿಯೊಂದು ಇಲಾಖೆಯು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ನೇರವಾಗಿ ಪ್ರಯೋಜನವಾಗುವಂಥ ಯೋಜನೆಗಳೂ ಒಳಗೊಂಡಂತೆ ಯೋಜನೆಗಳನ್ನು ಗುರುತಿಸತಕ್ಕದ್ದು.

(2) ಮೇಲಿನ (1)ನೇ ಉಪ-ನಿಯಮದ ಮೇರೆಗೆ ಯೋಜನೆಗಳನ್ನು ಗುರುತಿಸುವಾಗ ಪ್ರತಿಯೊಂದು ಇಲಾಖೆಯು ಈ ಮುಂದಿನವುಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು:

(ಎ) ಅಭಿವೃದ್ಧಿ ಕಾರ್ಯಗಳಲ್ಲಿ ಗುರುತಿಸಲಾದ ಅಂತರಗಳನ್ನು ತಗ್ಗಿಸುವ ಉದ್ದೇಶದಿಂದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳು, ವ್ಯಕ್ತಿಗಳು, ಕುಟುಂಬಗಳು, ವಾಸಸ್ಥಳಗಳು, ಸಾಮಾಜಿಕ ಗುಂಪುಗಳು ಹಾಗೂ ಸಂಸ್ಥೆಗಳಿಗೆ ಮಾತ್ರ ನೇರ ಮತ್ತು ಪ್ರಮಾಣಾನುಗತವಾದ ಪ್ರಯೋಜನಗಳನ್ನು ಒದಗಿಸಬೇಕು.

(ಬಿ) ವೃತ್ತಿಪರ ಮತ್ತು ಇತರ ಉನ್ನತ ಶಿಕ್ಷಣ/ ತಾಂತ್ರಿಕ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ಮತ್ತು ಸ್ಪರ್ಧಾತ್ಮಕ ಆಯ್ಕೆಗಳಿಗಾಗಿ ಉದ್ಯೋಗಕದಕ್ಕಾಗಿ, ಕೌಶಲ್ಯಾಭಿವೃದ್ಧಿಗಾಗಿ ಗುಣಮಟ್ಟದ ಶಿಕ್ಷಣ, ಗುಣಮಟ್ಟದ ವಸತಿ ಶಾಲೆಗಳು, ಉನ್ನತ ಶಿಕ್ಷಣ ಪರಿಹಾರಾತ್ಮಕ ಮತ್ತು ವಿಶೇಷ ತರಬೇತಿ ನೀಡಲು ಆದ್ಯತೆ ನೀಡುವುದು.

(ಸಿ) ಆರೋಗ್ಯ ವಿಮೆ ಹಾಗೂ ಅರಿವು ಮೂಡಿಸುವುದು ಒಳಗೊಂಡಂತೆ ಆರೋಗ್ಯ ಪಾಲನೆ ಮತ್ತು ಚಿಕಿತ್ಸೆ.

(ಡಿ) ಸಮುದಾಯ ನೈರ್ಮಲ್ಯ ಒಳಗೊಂಡಂತೆ ವಸತಿ ಹಾಗೂ ನೈರ್ಮಲೀಕರಣ.

(ಇ) ಭೂರಹಿತರಿಗೆ ಭೂಮಿ, ನೀರಾವರಿ ಸೌಲಭ್ಯ, ವಾಣಿಜ್ಯೋದ್ಯಮದ ಅಭಿವೃದ್ಧಿ ಮೊದಲಾದವು ಒಳಗೊಂಡಂತೆ ಆರ್ಥಿಕಾಭಿವೃದ್ಧಿ.

(ಎಫ್) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ವಾಸಸ್ಥಳಗಳಿಗೆ ಸಂಪರ್ಕ, ಸಾಮಾಜಿಕ ಭದ್ರತೆ ಹಾಗೂ ಅವರ ಘನತೆಯೂ ಒಳಗೊಂಡಂತೆ ಎಲ್ಲಾ ಅವಶ್ಯಕ ಸೌಕರ್ಯಗಳು.

(ಜಿ) ಅಭಿವೃದ್ಧಿಯಲ್ಲಿನ ಅಂತರವನ್ನು ಪರಿಣಾಮಕಾರಿಯಾಗಿ ತಗ್ಗಿಸುವಂಥ ಯಾವುದೇ ಇತರ ಕ್ರಮಗಳು.

(ಹೆಚ್) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಹೆಚ್ಚಾಗಿರುವಂಥ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿಯಲ್ಲಿ ಸಮಾನತೆ ತರುವ ಸಲುವಾಗಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ಮಹಿಳೆಯರಿಗೆ, ವಿಕಲಚೇತನರಿಗೆ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಲ್ಲಿನ ಅತ್ಯಂತ ಹಿಂದುಳಿದ ಉಪ–ಗುಂಪುಗಳಿಗೆ ಯುಕ್ತ ಪಾಲನ್ನು ನೀಡುವುದು.

(3) ಅನುಸೂಚಿತ ಜಾತಿಗಳ ಉಪ–ಹಂಚಿಕೆ/ ಬುಡಕಟ್ಟು ಉಪ–ಹಂಚಿಕೆ ಮೇರೆಗೆ ಫಲಾನುಭವಿಗಳನ್ನು ಗುರುತಿಸುವುದು.

ಪ್ರಯೋಜನಗಳನ್ನು ಪಡೆದುಕೊಳ್ಳಲು ಪದೇಪದೇ ಅರ್ಜಿ ಸಲ್ಲಿಸುವ ಅರ್ಜಿದಾರರ ಹೊರೆಯನ್ನು ಕಡಿಮೆ ಮಾಡಲು; ಮತ್ತು ಅರ್ಹ ಫಲಾನುಭವಿಗಳನ್ನು ಸೂಕ್ತವಾಗಿ ಗುರುತಿಸುವ ಸಲುವಾಗಿ ಅನುಸೂಚಿತ ಜಾತಿಗಳ ಉಪ–ಹಂಚಿಕೆ ಮತ್ತು ಬುಡಕಟ್ಟಿನ ಉಪ–ಯೋಜನೆಯ ಉಪ–ಹಂಚಿಕೆ ಅಡಿಯಲ್ಲಿ ಅನುಷ್ಠಾನಗೊಳಿಸುವ ಇಲಾಖೆಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಒಂದು ಅಥವಾ ಹೆಚ್ಚು ವರ್ಷಗಳವರೆಗೆ ನಿರಂತರವಾಗಿ ಪ್ರಯೋಜನ ನೀಡುವಂಥ ಯೋಜನೆಗಳ ಅರ್ಹತಾ ಮಾನದಂಡಗಳಿಗನುಸಾರವಾಗಿ ಪಾರದರ್ಶಕವಾಗಿ ಫಲಾನುಭವಿಗಳನ್ನು ಗುರುತಿಸಲು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

ಫಲಾನುಭವಿಗಳನ್ನು ಗುರುತಿಸುವಾಗ ತೆಗೆದುಕೊಳ್ಳಬೇಕಾದ ನಿರ್ದಿಷ್ಟ ಕ್ರಮಗಳು.

(i) ಪ್ರತಿಯೊಂದು ಇಲಾಖೆಯು, ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು;

(ii) ಅರ್ಜಿದಾರರ ಅರ್ಹತೆಯನ್ನು ಪರಿಶೀಲಿಸಿ, ಅರ್ಜಿದಾರರ ಮತ್ತು ಸಾರ್ವಜನಿಕರ ಮಾಹಿತಿಗಾಗಿ ಅರ್ಹ ಫಲಾನುಭವಿಗಳ ಪಟ್ಟಿಯನ್ನು ನಿರ್ದಿಷ್ಟ ಗ್ರಾಮ ಪಂಚಾಯತ್ ಕಛೇರಿಯಲ್ಲಿ ಮತ್ತು ವಿಧಾನಸಭಾ ಕ್ಷೇತ್ರಾವಾರು ಕ್ರೋಢೀಕರಿಸಿದ ಪಟ್ಟಿಯನ್ನು ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯಲ್ಲಿ ಮತ್ತು ಸಂಬಂಧಪಟ್ಟ ಇಲಾಖೆಗಳಲ್ಲಿ ಪ್ರಕಟಿಸುವುದು.

(iii) ಅರ್ಹ ಫಲಾನುಭವಿಗಳ ಪಟ್ಟಿಯನ್ನು ಅಂತಿಮವಾಗಿ ಹಂತವಾರು ಆಯ್ಕೆ ಮಾಡಲು ಸಂಬಂಧಪಟ್ಟ ಆಯ್ಕೆ ಸಮಿತಿಯ ಮುಂದೆ ಸಲ್ಲಿಸಬೇಕು ಹಾಗೂ ಆಯ್ಕೆ ಮಾಡಿದ ತರುವಾಯ ಪಟ್ಟಿಯನ್ನು ಪ್ರಕಟಿಸಬೇಕು.

(iv) ಗುರುತಿಸಲಾದ ಅರ್ಹ ಫಲಾನುಭವಿಗಳ ಪಟ್ಟಿ ಪೂರ್ಣಗೊಂಡ ತರುವಾಯ, ತರುವಾಯದ ವರ್ಷಗಳಲ್ಲಿ, ಅವಶ್ಯವಿದ್ದಾಗಲೆಲ್ಲಾ ಅಂಥದೇ ಕ್ರಮದಲ್ಲಿ ಅರ್ಹ ಫಲಾನುಭವಿಗಳ ಹೊಸ ಪಟ್ಟಿಯನ್ನು ತಯಾರಿಸಬೇಕು.

10. 16ನೇ ಪ್ರಕರಣದ ಮೇರೆಗೆ ಸಾಮಾನ್ಯ ಯೋಜನೆಗಳ ವ್ಯಾಪ್ತಿಯಲ್ಲಿ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳನ್ನು ತರಲು ಹೊಣೆಗಾರಿಕೆ:

ಇಲಾಖೆಗಳು, ಅನುಸೂಚಿತ ಜಾತಿ ಉಪ–ಹಂಚಿಕೆ ಹಾಗೂ ಬುಡಕಟ್ಟು ಉಪ–ಹಂಚಿಕೆಗಳ ಮೇರೆಗೆ ನಿರ್ದಿಷ್ಟ ಯೋಜನೆಗಳ ಜೊತೆಗೆ ಅನುಷ್ಠಾನಗೊಳಿಸುತ್ತಿರುವ, ಮುಂದುವರೆದ ಹಾಗೂ ಹೊಸ ಯೋಜನೆಗಳ ಅಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಫಲಾನುಭವಿಗಳನ್ನು ಸಹ ಒಳಗೊಂಡಿರತಕ್ಕದ್ದು.

11. ನೋಡಲ್ ಏಜೆನ್ಸಿಯು ಮೌಲ್ಯಮಾಪನ ಮಾಡುವುದಕ್ಕಾಗಿ ಅನುಸೂಚಿತ ಜಾತಿಗಳ ಉಪ–ಹಂಚಿಕೆ/ ಬುಡಕಟ್ಟು ಉಪ–ಹಂಚಿಕೆಯ ಅಡಿಯಲ್ಲಿ ಆಯವ್ಯಯ ಪ್ರಸ್ತಾಪಗಳನ್ನು ಸಿದ್ಧಪಡಿಸುವುದು ಹಾಗೂ ಸಲ್ಲಿಸುವುದು.

(1) ಯೋಜನೆಗಳ ಆಯವ್ಯಯ ಪ್ರಸ್ತಾಪಗಳನ್ನು ಸಿದ್ಧಪಡಿಸುವಾಗ, ನೋಡಲ್ ಇಲಾಖೆ ಮತ್ತು ಇತರ ಇಲಾಖೆಗಳ ಮುಂದೆ ಹೇಳಿದ ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು.

(i) ನೋಡಲ್ ಇಲಾಖೆಯು, (ಎ) ಆಯವ್ಯಯದ ಪ್ರಸ್ತಾಪಗಳನ್ನು ಅಂತಿಮಗೊಳಿಸುವ ಮುಂಚೆ, ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳಿಗೆ ಸೇರಿರುವ, ವಿವಿಧ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ಮಾಡುವುದು

(ಬಿ) ಸಮಾಲೋಚನೆಯ ಸಮಯದಲ್ಲಿ ಇಲಾಖೆಗಳ ಪ್ರತಿನಿಧಿಗಳನ್ನು ಆಹ್ವಾನಿಸುವುದು.

(ಸಿ) ಜಿಲ್ಲಾ ಮೇಲ್ವಿಚಾರಣಾ ಸಮಿತಿಯಿಂದ ಪ್ರಸ್ತಾವನೆಗಳು/ ಸಲಹೆಗಳನ್ನು ಆಹ್ವಾನಿಸುವುದು.ಜಿಲ್ಲಾ ಮೇಲ್ವಿಚಾರಣಾ ಸಮಿತಿಗಳು, ಆ ಜಿಲ್ಲೆಯಲ್ಲಿರುವ ಅನುಸೂಚಿತ ಜಾತಿಗಳು/ ಅನುಸೂಚಿತ ಬುಡಕಟ್ಟುಗಳ ಸಮುದಾಯಗಳ ಪ್ರತಿನಿಧಿಗಳೊಂದಿಗೆ ಸಮಾಲೋಚಿಸುವುದರ ಜೊತೆಗೆ ಯಾವುವಾದರೂ ಪ್ರಸ್ತಾವನೆಗಳು/ ಸಲಹೆಗಳೇನಾದರೂ ಇದ್ದರೆ ಸಲ್ಲಿಸತಕ್ಕದ್ದು.

(2) ಪ್ರತಿಯೊಂದು ಅನುಷ್ಠಾನಗೊಳಿಸುವ ಇಲಾಖೆಯು, ಯೋಜನೆಗಳನ್ನು ಸಿದ್ಧಪಡಿಸುವಾಗ ಸಂಬಂಧಪಟ್ಟ ನಿರ್ದಿಷ್ಟ ಹಿತಾಸಕ್ತಿದಾರರೊಂದಿಗೆ ಸಹ ಸಮಾಲೋಚಿಸಬೇಕು.

(3) ಅವುಗಳ ಅನುಷ್ಠಾನದ ತರುವಾಯ, ಪ್ರಸ್ತಾವಿತ ಯೋಜನೆಗಳು, ಪ್ರಭಾವ ಬೀರಿದ ನಿರ್ದಿಷ್ಟ ಪ್ರದೇಶಗಳು ಮತ್ತು ಅವುಗಳ ಪ್ರಮಾಣಾನುಗತ ಪ್ರಯೋಜನಗಳನ್ನು ಸೂಚಿಸತಕ್ಕದ್ದು.

(4) ಅನುಸೂಚಿತ ಜಾತಿ/ ಅನುಸೂಚಿತ ಬುಡಕಟ್ಟುಗಳ ಉಪ–ಹಂಚಿಕೆಯ ಅಡಿಯಲ್ಲಿನ ಯೋಜನೆಗಳನ್ನು ರಾಜಸ್ವ ಹಾಗೂ ಬಂಡವಾಳ ಸ್ವರೂಪದ್ದವುಗಳನ್ನಾಗಿ ವರ್ಗೀಕರಿಸತಕ್ಕದ್ದು.

(ಎ) ರಾಜಸ್ವ ಯೋಜನೆಗಳೆಂದರೆ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ವ್ಯಕ್ತಿಗಳು, ಕುಟುಂಬಗಳು ಅಥವಾ ಗುಂಪುಗಳಿಗೆ ಮಾತ್ರ ನೇರವಾಗಿ ಪ್ರಯೋಜನವಾಗುವ ಮತ್ತು ಪರಿಮಾಣಾತ್ಮಕ ಸೌಲಭ್ಯಗಳನ್ನು ನೀಡಲು ಅನುಷ್ಠಾನಗೊಳಿಸುವಂಥ ಯೋಜನೆಗಳು ಹಾಗೂ ಈ ಯೋಜನೆಗಳಿಗೆ ಯೋಜನಾ ವೆಚ್ಚದ ಶೇಕಡ 100 ರಷ್ಟನ್ನು ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅಡಿಯಲ್ಲಿ ಹಂಚಿಕೆ ಮಾಡತಕ್ಕದ್ದು ಹಾಗೂ ವೆಚ್ಚಭರಿಸತಕ್ಕದ್ದು.

(ಬಿ) ಇತರರೊಂದಿಗೆ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳ ವ್ಯಕ್ತಿಗಳು ಅಥವಾ ಕುಟುಂಬಗಳು ಅಥವಾ ಗುಂಪುಗಳಿಗೆ ಪ್ರಯೋಜನಗಳನ್ನು ಒದಗಿಸುವಾಗ ಶಿಕ್ಷಣ, ಆರೋಗ್ಯ ಮೊದಲಾದಂಥ ಸಾಮಾನ್ಯ ಸಾಮಾಜಿಕ ವಲಯದ ಯೋಜನೆಗಳು ಇತರ ರಾಜಸ್ವ ಯೋಜನೆಗಳಾಗುತ್ತವೆ.

ಪರಂತು, ಇಲಾಖೆಯು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟು ಪ್ರಮಾಣಾನುಗತ ಸೌಲಭ್ಯಗಳ ಜೊತೆಗೆ ನೋಡಲ್ ಇಲಾಖೆಗೆ ಫಲಾನುಭವಿಗಳ ಪಟ್ಟಿಯನ್ನು ಒದಗಿಸಿದ್ದರೆ ಮಾತ್ರ ಯೋಜನೆಯನ್ನು ಇತರ್‍ರ್ರ್ರ ರಾಜಸ್ವ ಯೋಜನೆಯೆಂದು ವರ್ಗೀಕರಿಸಬಹುದಾಗಿದೆ ಮತ್ತು ಅಂಥ ಯೋಜನೆಗಳಿಗೆ ನಿಧಿಗಳ ಹಂಚಿಕೆಯನ್ನು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗಾಗಿ ಮೀಸಲಿರಿಸಿದ ಫಲಾನುಭವಿಗಳ ಮತ್ತು ಸೌಲಭ್ಯಗಳ ಪ್ರಮಾಣಕ್ಕನುಸಾರವಾಗಿ ಸೀಮಿತಗೊಳಿಸತಕ್ಕದ್ದು.

(ಸಿ) ಬಂಡವಾಳ ಯೋಜನೆಗಳೆಂದರೆ, ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಕಾಲೋನಿಗಳಲ್ಲಿ ರಸ್ತೆಗಳು ಹಾಗೂ ಚರಂಡಿಗಳ ನಿರ್ಮಾಣ, ವಸತಿ ನಿಲಯಗಳು, ವಸತಿ ಶಾಲೆಗಳು, ಶೈಕ್ಷಣಿಕ ಸಂಸ್ಥೆಗಳು, ಸಮುದಾಯ ಭವನಗಳು, ಸಮುದಾಯ ನೀರಾವರಿ ಯೋಜನೆಗಳು ಮೊದಲಾದವುಗಳ ನಿರ್ಮಾಣದಂಥ ಅನುಸೂಚಿತ ಜಾತಿ/ ಅನುಸೂಚಿತ ಬುಡಕಟ್ಟುಗಳ ವ್ಯಕ್ತಿಗಳ ನೇರ ಪ್ರಯೋಜನಕ್ಕಾಗಿ ಮತ್ತು ವಾಸಸ್ಥಾನಗಳ ಅಭಿವೃದ್ಧಿಗಾಗಿ ಇರುವ ಸಾರ್ವಜನಿಕ ಸ್ವತ್ತುಗಳನ್ನು ಸೃಜಿಸುವ ಯೋಜನೆಗಳು ಮತ್ತು ಈ ಯೋಜನೆಗಳಿಗೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅಡಿಯಲ್ಲಿ ಶೇಕಡ 100 ರಷ್ಟು ಯೋಜನಾ ವೆಚ್ಚವನ್ನು ಹಂಚಿಕೆ ಮಾಡಿ ವೆಚ್ಚಭರಿಸತಕ್ಕದ್ದು.

(ಡಿ) ಇತರ ಬಂಡವಾಳ ಯೋಜನೆಗಳು ವಿಭಜಿಸಲಾಗದಂಥ ಮೂಲಸೌಕರ್ಯ ಯೋಜನೆಗಳಾಗಿದ್ದು, ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳಿಗೆ ಪ್ರಾಪ್ತವಾಗಬೇಕಾದ ಪ್ರಯೋಜನಗಳನ್ನು ಪರಿಮಾಣಾತ್ಮಕಗೊಳಿಸುವುದು ಸಾಧ್ಯವಾಗುವುದಿಲ್ಲ. ಆದರೆ, ಅಂಥ ಮೂಲಸೌಕರ್ಯವು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳೂ ಸೇರಿದಂತೆ ಸಮಗ್ರ ಅಭಿವೃದ್ಧಿಗಾಗಿ ಅವಶ್ಯಕವಿದೆ. ಅನುಸೂಚಿತ ಜಾತಿ ಉಪ–ಹಂಚಿಕೆ/ ಅನುಸೂಚಿತ ಪಂಗಡಗಳ ಉಪ–ಹಂಚಿಕೆ ಅಡಿಯಲ್ಲಿ ತೋರಿಸಬೇಕಾದ ಯೋಜನೆಯ ವೆಚ್ಚದ ಭಾಗವನ್ನು ಸರ್ಕಾರವು ಪ್ರತ್ಯೇಕವಾಗಿ ಪರಿಷತ್ತಿನ ಶಿಫಾರಸ್ಸುಗಳ ಆಧಾರದ ಮೇಲೆ ಸೂಚಿಸತಕ್ಕದ್ದು.

(5) ಇಲಾಖೆಯು, ನೋಡಲ್ ಇಲಾಖೆಯ ನಿಯಮಗಳಿಗೆ ಅನುಬಂಧಿಸಲಾಗಿರುವ ಅನುಸೂಚಿತ ಜಾತಿಗಳ ಉಪ–ಹಂಚಿಕೆಗಾಗಿ ನಮೂನೆ–1 ಹಾಗೂ ಅನುಸೂಚಿತ ಬುಡಕಟ್ಟುಗಳ ಉಪ–ಹಂಚಿಕೆಯ ನಮೂನೆ–3 ರಲ್ಲಿ ನೋಡಲ್ ಇಲಾಖೆಗೆ ಯೋಜನಾವಾರು ಆಯವ್ಯಯದ ಕರಡು ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು. ನೋಡಲ್ ಇಲಾಖೆಯು ಇದು ಅಧಿನಿಯಮ ಹಾಗೂ ನಿಯಮಗಳ ಅನುಸಾರವಿದೆಯೇ ಎಂಬುದನ್ನು ಪರಿಶೀಲಿಸಬೇಕು ಮತ್ತು ಅವಶ್ಯಕವೆನಿಸಿದರೆ ಅದನ್ನು ಪರಿಶೀಲನೆಗಾಗಿ ಇಲಾಖೆಗೆ ಹಿಂದಿರುಗಿಸಬೇಕು ಹಾಗೂ ರಾಜ್ಯ ಪರಿಷತ್ತಿನ ಶಿಫಾರಸಿಗಾಗಿ ನೋಡಲ್ ಏಜೆನ್ಸಿಯ ಮುಂದೆ ಮಂಡಿಸಬೇಕು.

12. ಪ್ರಕರಣ 18 ಮತ್ತು 19ರ ಅಡಿಯಲ್ಲಿ ರಾಜ್ಯ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿಗೆ ರಾಜ್ಯ ನೋಡಲ್ ಏಜೆನ್ಸಿ ಮೂಲಕ ಅನುಸೂಚಿತ ಜಾತಿ ಉಪ–ಹಂಚಿಕೆ/ ಬುಡಕಟ್ಟು ಉಪ–ಹಂಚಿಕೆಯ ಅಡಿಯಲ್ಲಿ ಸಲ್ಲಿಸಿದ ಪ್ರಸ್ತಾವನೆಗಳ ಮೌಲ್ಯ ನಿರ್ಣಯ ಹಾಗೂ ಶಿಫಾರಸು.

(1) ಆಯವ್ಯಯ ಪೂರ್ವದ ಸಿದ್ಧತೆಯಂತೆ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ನೋಡಲ್ ಏಜೆನ್ಸಿಯು ನೋಡಲ್ ಇಲಾಖೆಯ ನೆರವಿನೊಂದಿಗೆ ಅನುಸೂಚಿತ ಜಾತಿಗಳ ಉಪ–ಹಂಚಿಕೆ ಮತ್ತು ಬುಡಕಟ್ಟು ಉಪ–ಹಂಚಿಕೆಯ ಅಡಿಯಲ್ಲಿ ವಿವಿಧ ಇಲಾಖೆಗಳು ಸಲ್ಲಿಸಿರುವ ಆಯವ್ಯಯ ಕರಡು ಪ್ರಸ್ತಾವನೆಗಳ ಮೌಲ್ಯನಿರ್ಣಯ ಮಾಡತಕ್ಕದ್ದು. ನೋಡಲ್ ಏಜೆನ್ಸಿಗೆ ಯೋಜನೆಯಲ್ಲಿ ಯಾವುದಾದರೂ ನ್ಯೂನತೆ ಕಂಡುಬಂದರೆ, ಅದನ್ನು ಸರಿಪಡಿಸುವುದಕ್ಕಾಗಿ ಹಾಗೂ ಅದನ್ನು ಪುನಃ ಸಲ್ಲಿಸುವುದಕ್ಕಾಗಿ ಸಂಬಂಧಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡಬಹುದು.

(2) ನೋಡಲ್ ಏಜೆನ್ಸಿಯು ಅನುಮೋದಿಸಿದ ಯೋಜನಾವಾರು ಆಯವ್ಯಯ ಪ್ರಸ್ತಾವನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಬೇಕಾದ ರಾಜ್ಯ ವಾರ್ಷಿಕ ಆಯವ್ಯಯ ಪ್ರಸ್ತಾವನೆಗಳಲ್ಲಿ, ಇಲಾಖೆಗಳ ಅನುದಾನಗಳ ಬೇಡಿಕೆಗಳಲ್ಲಿ ಸೇರ್ಪಡೆ ಮಾಡಲು ಆರ್ಥಿಕ ಇಲಾಖೆಗೆ ಸಲ್ಲಿಸತಕ್ಕದ್ದು. ಅನುಸೂಚಿತ ಜಾತಿ ಉಪ–ಹಂಚಿಕೆ ಹಾಗೂ ಬುಡಕಟ್ಟು ಉಪ–ಹಂಚಿಕೆ ಅಡಿಯಲ್ಲಿ ಅನುದಾನಗಳಿಗಾಗಿನ ಬೇಡಿಕೆಯನ್ನು ಸಿದ್ಧಪಡಿಸುವಾಗ ಪ್ರತಿಯೊಂದು ಇಲಾಖೆಗೆ ಅನುಸೂಚಿತ ಜಾತಿ ಉಪ–ಹಂಚಿಕೆಗಾಗಿ ಒಂದು ಲೆಕ್ಕಶೀರ್ಷಿಕೆಯನ್ನು ಮತ್ತು ಬುಡಕಟ್ಟು ಉಪ–ಹಂಚಿಕೆಗಾಗಿ ಮತ್ತೊಂದು ಲೆಕ್ಕಶೀರ್ಷಿಕೆಯನ್ನು ತೋರಿಸುವ ಪ್ರತ್ಯೇಕ ಸಂಪುಟವನ್ನು ಸಲ್ಲಿಸತಕ್ಕದ್ದು.

(3) ಅನುಸೂಚಿತ ಜಾತಿ ಉಪ–ಹಂಚಿಕೆ/ ಬುಡಕಟ್ಟು ಉಪ–ಹಂಚಿಕೆ ಅಡಿಯಲ್ಲಿ ಆಯವ್ಯಯ ಪೂರ್ವ ಯೋಜನಾವಾರು ವಿವರಗಳನ್ನು ಅನುಷ್ಠಾನಗೊಳಿಸುವ ಇಲಾಖೆಗಳು, ಈ ನಿಯಮಗಳಿಗೆ ಸೇರಿಸಿರುವ ನಮೂನೆ–2 (ಅನುಸೂಚಿತ ಜಾತಿಗಳ ಉಪಹಂಚಿಕೆ) ಮತ್ತು ನಮೂನೆ–4 (ಬುಡಕಟ್ಟುಗಳ ಉಪಹಂಚಿಕೆ) ಗಳಲ್ಲಿ ನೋಡಲ್ ಇಲಾಖೆಗೆ ಸಲ್ಲಿಸತಕ್ಕದ್ದು.

(4) ತರುವಾಯ ನೋಡಲ್ ಏಜೆನ್ಸಿಯು, ಆಯವ್ಯಯದಲ್ಲಿ ಹೊಸ ಯೋಜನೆ ಏನಾದರೂ ಘೋಷಿಸಿದ್ದರೆ, ಅದನ್ನು ಸೇರಿದಂತೆ ವಿವರವಾದ ಯೋಜನಾವಾರು ಚರ್ಚೆಯನ್ನು ನಡೆಸತಕ್ಕದ್ದು ಮತು ಅದನ್ನು ರಾಜ್ಯ ಪರಿಷತ್ತಿಗೆ ಅಂತಿಮ ಅನುಮೋದನೆಗಾಗಿ ಶಿಫಾರಸು ಮಾಡತಕ್ಕದ್ದು.

(5) ನೋಡಲ್ ಏಜೆನ್ಸಿಯು, ರಾಜ್ಯ ಪರಿಷತ್ತಿನ ಅನುಮೋದನೆಗಾಗಿ ಅನುಸೂಚಿತ ಜಾತಿ ಉಪ–ಹಂಚಿಕೆ ಹಾಗೂ ಬುಡಕಟ್ಟು ಉಪ–ಹಂಚಿಕೆಯ ಅಡಿಯಲ್ಲಿ ಮೌಲ್ಯ ನಿರ್ಣಯ ಮಾಡಿದ ನಂತರ ಸಹಾಯ ಧನ ಮಟ್ಟ ಮೊದಲಾದವುಗಳೊಂದಿಗೆ ಯೋಜನೆಗಳನ್ನು ಶಿಫಾರಸ್ಸು ಮಾಡತಕ್ಕದ್ದು.

(6) ರಾಜ್ಯ ಪರಿಷತ್ತು ಯೋಜನೆಗಳನ್ನು ಅಂತಿಮ ಅನುಮೋದನೆ ನೀಡಿದ ತರುವಾಯ, ಸಂಬಂಧಪಟ್ಟ ಇಲಾಖೆಗಳು, ಅನುಮೋದಿತ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ, ಯೋಜನೆಗಳು ಹಾಗೂ ಸಹಾಯಧನ ಹಂತಗಳು ಮೊದಲಾದವುಗಳನ್ನು ಸೂಚಿಸಿ ಸರ್ಕಾರಿ ಆದೇಶಗಳನ್ನು ಹೊರಡಿಸತಕ್ಕದ್ದು. ಸೂಕ್ತ ಸಮರ್ಥನೆಯೊಂದಿಗೆ ಮೊಬಲಗೂ ಒಳಗೊಂಡಂತೆ ಅನುಮೋದಿತ ಯೋಜನೆಗಳಲ್ಲಿ ಯಾವುದಾದರೂ ಮಾರ್ಪಾಟು, ಬದಲಾವಣೆ ಅಥವಾ ಮರುಹಂಚಿಕೆ ಮಾಡಬೇಕೆಂದು ಅಗತ್ಯಪಡಿಸಿದ್ದರೆ, ನೋಡಲ್ ಏಜೆನ್ಸಿಯು ಅದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು.

(7) ರಾಜ್ಯ ಪರಿಷತ್ತು ಅನುಮೋದಿಸಿದ ಯೋಜನೆಗಳನ್ನು, ಸಾರ್ವಜನಿಕರ ಮಾಹಿತಿಗಾಗಿ, ಎಲ್ಲಾ ಅಭಿವೃದ್ಧಿ ಇಲಾಖೆಗಳ ವೆಬ್‌ಸೈಟ್‌ನಲ್ಲಿ ಹಾಗೂ ನೋಡಲ್ ಇಲಾಖೆಯ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸತಕ್ಕದ್ದು.

(8) ನೋಡಲ್ ಏಜೆನ್ಸಿಯು, ರಾಜ್ಯ ಪರಿಷತ್ತು ಗೊತ್ತುಪಡಿಸಿದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

13. ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆ ಅಡಿಯಲ್ಲಿ ಆಯವ್ಯಯ ಬಿಡುಗಡೆ ಆದೇಶಗಳು.

(1) ವೆಚ್ಚದ ಸಂಪುಟಗಳನ್ನು ಸ್ವೀಕರಿಸಿದ ನಂತರ ಸಂಬಂಧಪಟ್ಟ ಇಲಾಖೆಗಳು, ಯೋಜನೆಗಳಿಗಾಗಿ ಮಾಡಲಾದ ಹಂಚಿಕೆಯ $^1/_4$ ಭಾಗದಷ್ಟು ಮೊಬಲಗನ್ನು ಮೊದಲ ಮೂರು ತಿಂಗಳಲ್ಲಿ ನಿಕಟಪೂರ್ವ ಹಣಕಾಸು ವರ್ಷದಲ್ಲಿ ಪರಿಷತ್ತು ಅನುಮೋದಿಸಿದ್ದ ಮುಂದುವರಿದ ಸ್ಕೀಮ್‌ಗಳಿಗಾಗಿ ಮಾತ್ರ ಬಿಡುಗಡೆ ಮಾಡತಕ್ಕದ್ದು. ಅಲ್ಲದೆ, ರಾಜ್ಯ ಪರಿಷತ್ತು ಯೋಜನೆಗಳಿಗೆ ಅನುಮೋದನೆ ನೀಡಿದ ತರುವಾಯ, ಉಳಿದಿರುವ ಹಂಚಿಕೆಯನ್ನು, ನಿಯೋಜಿತವಾದ ಅಧಿಕಾರಗಳಿಗೆ ಅನುಸಾರವಾಗಿ ಮೂರು ತಿಂಗಳಿಗೊಮ್ಮೆ ಬಿಡುಗಡೆಗೊಳಿಸತಕ್ಕದ್ದು.

(2) ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ರಾಜ್ಯವಲಯದ ಅಡಿಯಲ್ಲಿ ಯಾವುದೇ ವಿಳಂಬವಿಲ್ಲದೆ ಜಿಲ್ಲಾ ಅಧಿಕಾರಿಗಳಿಗೆ ಅಥವಾ ಅನುಷ್ಠಾನ ಅಧಿಕಾರಿಗಳಿಗೆ, ನಿಧಿಗಳನ್ನು ಬಿಡುಗಡೆ ಮಾಡಬೇಕು.

(3) ಆಯವ್ಯಯ -ಬಿಡುಗಡೆ ಆದೇಶಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ನೋಡಲ್ ಇಲಾಖೆಯ ಆಡಳಿತಾತ್ಮಕ ಮತ್ತು ತಾಂತ್ರಿಕ ನೆರವು ಘಟಕವು ಸಹ ನಿಧಿಗಳನ್ನು ಸಕಾಲದಲ್ಲಿ ಬಿಡುಗಡೆ ಮಾಡುವುದಕ್ಕಾಗಿ ಅನುಸರಣಾ ಕ್ರಮಗಳನ್ನು ಕೈಗೊಳ್ಳಬೇಕು.

14. ಅನುಸೂಚಿತ ಜಾತಿ ಉಪ-ಹಂಚಿಕೆ ಹಾಗೂ ಬುಡಕಟ್ಟು ಉಪ-ಹಂಚಿಕೆಯನ್ನು ಅನುಷ್ಠಾನಗೊಳಿಸುವಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ.

(1) ನೋಡಲ್ ಇಲಾಖೆಯು, ಯುಕ್ತ ಮಧ್ಯಂತರ ಅವಧಿಯಲ್ಲಿ ನೋಡಲ್ ಇಲಾಖೆಯ ವೆಬ್‌ಪೋರ್ಟ್‌ನಲ್ಲಿ ಈ ಮುಂದಿನ ವಿವರಗಳನ್ನು ಪ್ರಕಟಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು:

(ಎ) ರಾಜ್ಯದ ಒಟ್ಟು ಆಯವ್ಯಯ ವೆಚ್ಚ ಮತ್ತು ಹಂಚಿಕೆ ಮಾಡಬೇಕಾದ ಆಯವ್ಯಯ ಹಾಗೂ ಉಪ-ಹಂಚಿಕೆಗಳು.

(ಬಿ) ಎಲ್ಲಾ ಇಲಾಖೆಗಳ ಅನುಮೋದಿತ ಯೋಜನೆಗಳ ವಿವರಗಳು.

(ಸಿ) ಮಾಸಿಕ ಕಾರ್ಯ ಪ್ರಗತಿ ವರದಿಗಳ ವಿವರಗಳು.

(ಡಿ) ಉಪ-ಹಂಚಿಕೆಗಳ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಹಾಗೂ ಮೌಲ್ಯ ನಿರ್ಧರಣಾ ವರದಿಗಳು.

(2) ನೋಡಲ್ ಇಲಾಖೆಯು, ಅನುಸೂಚಿತ ಜಾತಿ ಉಪ-ಹಂಚಿಕೆ/ ಬುಡಕಟ್ಟು ಉಪ-ಹಂಚಿಕೆ ಅನುಷ್ಠಾನವನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡುವುದಕ್ಕಾಗಿ ಹಾಗೂ ಇಲಾಖೆಗಳು ದತ್ತಾಂಶ (ಡಾಟಾ) ವನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಹಾಗೂ ಅನುಸೂಚಿತ ಜಾತಿ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆ ನಿಧಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದಕ್ಕಾಗಿ ಸೂಕ್ತ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಹಾಗೂ ಅದನ್ನು ಅಳವಡಿಸಲು ಕ್ರಮಕೈಗೊಳ್ಳತಕ್ಕದ್ದು.

(3) ಮೇಲೆ ಹೇಳಿದ ವಿವರಗಳ ಜೊತೆಗೆ ಪ್ರತಿಯೊಂದು ಇಲಾಖೆಯು, ತನ್ನ ಜಾಲತಾಣದಲ್ಲಿ ಈ ಮುಂದಿನ ಮಾಹಿತಿಯನ್ನು ಸಹ ಪ್ರಕಟಿಸತಕ್ಕದ್ದು.

(ಎ) ಉಪ-ಹಂಚಿಕೆಯ ಅಡಿಯಲ್ಲಿ ಯೋಜನಾವಾರು ವಿವರಗಳು ಹಾಗೂ ಜಿಲ್ಲಾ ಹಂಚಿಕೆಗಳ ವಿವರಗಳು.

(ಬಿ) ಪ್ರತಿ ತ್ರೈಮಾಸಿಕ ಮುಕ್ತಾಯವಾದ ತರುವಾಯ, ವಿವಿಧ ಯೋಜನೆಗಳ ಅಡಿಯಲ್ಲಿ ನೆರವು ಪಡೆದ ಫಲಾನುಭವಿಗಳ ಪಟ್ಟಿ.

(ಸಿ) ಕೈಗೊಂಡಿರುವ ಮತ್ತು ಪೂರ್ಣಗೊಳಿಸಿರುವ ಕಾಮಗಾರಿಗಳು ಒಳಗೊಂಡಂತೆ ಪ್ರತಿ ಆರು ತಿಂಗಳಿಗೊಮ್ಮೆ ಯೋಜನೆಗಳ ಅನುಷ್ಠಾನದಲ್ಲಿ ಸಾಧಿಸಿರುವ ಸಾಧನೆಗಳ ವಿವರಗಳು.

15. ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆ ಅಡಿಯಲ್ಲಿ ಸಾಧಿಸಿದ ಪ್ರಶಂಸನೀಯ ಕಾರ್ಯಸಾಧನೆಗಾಗಿ ಪ್ರೋತ್ಸಾಹ ಧನ.

(1) ಸರ್ಕಾರವು, ಅಧಿನಿಯಮ, ನಿಯಮಗಳನ್ನು ಅನುಷ್ಠಾನಗೊಳಿಸುವಲ್ಲಿ ಪಾರದರ್ಶಕತೆ ಮತ್ತು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗಾಗಿ ಸೇವೆಯನ್ನು ಒದಗಿಸುವಲ್ಲಿ ಹಿರಿಮೆ ಸಾಧಿಸಿದ ಇಲಾಖೆಗಳು/ ಜಿಲ್ಲೆಗಳು ಮತ್ತು ಅಧಿಕಾರಿಗಳಿಗೆ ಅವರ ಅತ್ಯುತ್ತಮ ಕಾರ್ಯಸಾಧನೆಗಾಗಿ ಪುರಸ್ಕಾರ ನೀಡಲು, ಪ್ರೋತ್ಸಾಹ ಧನವನ್ನು ಒದಗಿಸತಕ್ಕದ್ದು. ಪುರಸ್ಕಾರಕ್ಕಾಗಿ ನಿರ್ದಿಷ್ಟ ಮಾನದಂಡಗಳು:- (ಎ) ಹಣಕಾಸು ಗುರಿಗೆ ಪ್ರತಿಯಾಗಿ ನಿಧಿಯ ಬಳಕೆ (ಬಿ) ಭೌತಿಕ ಗುರಿಯ ಸಾಧನೆಗಳ ಅನುಷ್ಠಾನದ ಗುಣಮಟ್ಟ (ಸಿ) ಪಾರದರ್ಶಕತೆ ತರುವಲ್ಲಿ ಅನುಸರಿಸಿದ ನವೀನ ಕ್ರಮಗಳು (ಡಿ) ಕುಂದುಕೊರತೆ ನಿವಾರಣಾ ವ್ಯವಸ್ಥೆ (ಇ) ಯಶೋಗಾಥೆಗಳ ಬಗೆಗೆ ಸಾಕ್ಷ್ಯಚಿತ್ರ ಹಾಗೂ ಸಮಗ್ರ ಸಾಧನೆಗಳು.

(2) ನೋಡಲ್ ಏಜೆನ್ಸಿಯು, ರಾಜ್ಯ ಪರಿಷತ್ತಿನ ಅನುಮೋದನೆಗಾಗಿ ಇಲಾಖೆ ಹಾಗೂ ಅಧಿಕಾರಿಗಳ ಉತ್ತಮ ಕಾರ್ಯಸಾಧನೆಯನ್ನು ಶಿಫಾರಸು ಮಾಡತಕ್ಕದ್ದು.

16. ಜಿಲ್ಲಾ ಮೇಲ್ವಿಚಾರಣಾ ಸಮಿತಿಯ ಪ್ರಕಾರ್ಯಗಳು (ಡಿಎಂಸಿ).

(1) ಜಿಲ್ಲಾ ಮೇಲ್ವಿಚಾರಣಾ ಸಮಿತಿಯು, ಜಿಲ್ಲೆಯಲ್ಲಿನ ಅನುಸೂಚಿತ ಜಾತಿ ಉಪ-ಹಂಚಿಕೆ ಹಾಗೂ ಬುಡಕಟ್ಟು ಉಪ-ಹಂಚಿಕೆಗಳ ಯುಕ್ತ ಅನುಷ್ಠಾನದ ಬಗ್ಗೆ ನಿಶ್ಚಿತಪಡಿಸಿಕೊಳ್ಳತಕ್ಕದ್ದು.

(2) ಜಿಲ್ಲಾ ಮೇಲ್ವಿಚಾರಣಾ ಸಮಿತಿಯು, ಭೌತಿಕ ಹಾಗೂ ಆರ್ಥಿಕ ಕಾರ್ಯ ಪ್ರಗತಿಯನ್ನು ಪರಿಶೀಲಿಸುವುದಕ್ಕಾಗಿ ತಿಂಗಳಿಗೆ ಒಮ್ಮೆ ಸಭೆ ಸೇರತಕ್ಕದ್ದು.

(3) ಜಿಲ್ಲಾ ಮೇಲ್ವಿಚಾರಣಾ ಸಮಿತಿಯು, ವಿವಿಧ ಇಲಾಖೆಗಳ ಕಾರ್ಯಪ್ರಗತಿಯ ವರದಿಗಳನ್ನು ಜಿಲ್ಲಾಡಳಿತದ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವ ಮೂಲಕ ಸಾರ್ವಜನಿಕ ವಲಯದಲ್ಲಿ ಪ್ರಚಾರ ಮಾಡಲಾಗಿದೆಯೆಂಬುದನ್ನು ನಿಶ್ಚಿತ ಪಡಿಸಿಕೊಳ್ಳಬೇಕು.

(4) ಆ ಜಿಲ್ಲೆಯಲ್ಲಿರುವ ಅನುಸೂಚಿತ ಜಾತಿಗಳು/ ಅನುಸೂಚಿತ ಬುಡಕಟ್ಟುಗಳಲ್ಲಿ ಗುರುತಿಸಲಾದ ಅಭಿವೃದ್ಧಿ ಅಂತರವನ್ನು ನಿವಾರಿಸಿದ ಅಥವಾ ತಗ್ಗಿಸಿದ ಬಗ್ಗೆ ಮೇಲ್ವಿಚಾರಣೆ ಮಾಡುವುದು.

(5) ಭೌತಿಕ ಮತ್ತು ಆರ್ಥಿಕ ಸೌಲಭ್ಯಗಳೆರಡರ ಯೋಜನಾವಾರು, ಗ್ರಾಮವಾರು, ಪಂಚಾಯತ್‌ವಾರು ಹಾಗೂ ಮತಕ್ಷೇತ್ರವಾರು ವಿವರಗಳನ್ನು ಹಾಗೂ ಫಲಾನುಭವಿಗಳ ಪಟ್ಟಿಯನ್ನು ನಿರ್ವಹಿಸಬೇಕು ಹಾಗೂ ಅವುಗಳನ್ನು ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಬೇಕು.

(6) ಸಾಮಾಜಿಕ ಲೆಕ್ಕಪರಿಶೋಧಕ ನಿರ್ಣಯಗಳನ್ನು ಪರಿಶೀಲಿಸುವುದು ಹಾಗೂ ಆ ವರದಿಗಳ ಆಧಾರದ ಮೇಲೆ ಅವಶ್ಯಕ ಸುಧಾರಕ ಕ್ರಮಗಳನ್ನು ಕೈಗೊಳ್ಳುವುದು.

(7) ಜಿಲ್ಲೆಯಲ್ಲಿ ಅಭಿವೃದ್ಧಿಯಲ್ಲಿನ ಅಂತರದ ವಿಶ್ಲೇಷಣೆಗೆ ಅವಕಾಶ ಕಲ್ಪಿಸುವುದು ಹಾಗೂ ಪರಿಹಾರ ಕ್ರಮಗಳನ್ನು ಸೂಚಿಸುವುದು.

(8) ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಅನುಸೂಚಿತ ಪಂಗಡಗಳ ಉಪ-ಹಂಚಿಕೆ ಅಡಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳು/ ಯೋಜನೆಗಳ ಭೌತಿಕ ಪರಿಶೀಲನೆಯನ್ನು ಮೂರನೇ ಪಕ್ಷಕಾರನ ಮೂಲಕ ಕೈಗೊಳ್ಳಲು ವ್ಯವಸ್ಥೆ ಮಾಡುವುದು.

(9) ಜಿಲ್ಲಾ ಮಟ್ಟದ ಅನುಷ್ಠಾನ ಇಲಾಖೆಗಳು, ಅನುಸೂಚಿತ ಜಾತಿಗಳ ಉಪ-ಹಂಚಿಕೆಗಾಗಿ ನಮೂನೆ ಡಿಪಿಆರ್-1 ರಲ್ಲಿ ಹಾಗೂ ಬುಡಕಟ್ಟು ಉಪ-ಹಂಚಿಕೆಗಾಗಿ ಡಿಪಿಆರ್-2 ರಲ್ಲಿ ಜಿಲ್ಲಾ ಮೇಲ್ವಿಚಾರಣಾ ಸಮಿತಿಗೆ ಮಾಸಿಕ ಕಾರ್ಯಪ್ರಗತಿ ವರದಿಯನ್ನು ಸಲ್ಲಿಸತಕ್ಕದ್ದು.

(10) ಜಿಲ್ಲಾ ಮೇಲ್ವಿಚಾರಣಾ ಸಮಿತಿಯು ಅನುಸೂಚಿತ ಜಾತಿಗಳ ಉಪ-ಹಂಚಿಕೆಗಾಗಿ ನಮೂನೆ ಡಿಕ್ಯೂಆರ್-1 ರಲ್ಲಿ ಹಾಗೂ ಬುಡಕಟ್ಟು ಉಪ ಹಂಚಿಕೆಗಾಗಿ ನಮೂನೆ ಡಿಕ್ಯೂಆರ್-2 ರಲ್ಲಿ ರಾಜ್ಯ ನೋಡಲ್ ಇಲಾಖೆಗೆ ಕ್ರೋಢೀಕೃತ ತ್ರೈಮಾಸಿಕ ವರದಿಯನ್ನು ಸಲ್ಲಿಸತಕ್ಕದ್ದು.

(11) ಪ್ರತಿಯೊಂದು ಇಲಾಖೆಯ ಭೌತಿಕ ಹಾಗೂ ಆರ್ಥಿಕ ಫಲಶೃತಿಗಳನ್ನು ಹಾಗೂ ಅನುಸೂಚಿತ ಜಾತಿ ಉಪ-ಹಂಚಿಕೆಗಾಗಿ ಹಾಗೂ ಬುಡಕಟ್ಟು ಉಪ-ಹಂಚಿಕೆಗಾಗಿ ಅನುಷ್ಠಾನದ ಮೇಲಿನ ಅಭಿವೃದ್ಧಿಯಲ್ಲಿ ಅಂತರವನ್ನು ತಗ್ಗಿಸುವಲ್ಲಿ ಸಾಧಿಸಿದ ಸಾಧನೆಗಳನ್ನು ಸೇರಿಸಿ ರಾಜ್ಯ ನೋಡಲ್ ಇಲಾಖೆಗೆ ಒಂದು ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದು.

(12) ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆ ಅನುಷ್ಠಾನಕ್ಕೆ ಸಂಬಂಧಿಸಿದ ಕುಂದುಕೊರತೆಗಳ ಬಗ್ಗೆ ಜಿಲ್ಲಾಮಟ್ಟದಲ್ಲಿ ಜಿಲ್ಲಾ ಮೇಲ್ವಿಚಾರಣಾ ಸಮಿತಿಯು, "ಜಿಲ್ಲಾ ಮಟ್ಟದ ಕುಂದುಕೊರತೆಗಳ ನಿವಾರಣಾ ಘಟಕ" ವಾಗಿ ಸಹ ಕಾರ್ಯನಿರ್ವಹಿಸತಕ್ಕದ್ದು.

(13) ಕಾಲಕಾಲಕ್ಕೆ ಸರ್ಕಾರ ಅಥವಾ ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆಯ ನೋಡಲ್ ಏಜೆನ್ಸಿಯು ಗೊತ್ತುಪಡಿಸಿದ ಯಾವುದೇ ಇತರ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

17. ತಿದ್ದುಪಡಿ ಅಧಿನಿಯಮದ 11(3)ನೇ ಪ್ರಕರಣದ ಮೇರೆಗೆ ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆ ಅಡಿಯಲ್ಲಿ ತಾಲ್ಲೂಕು ಮಟ್ಟದ ಮೇಲ್ವಿಚಾರಣಾ ಸಮಿತಿಯ ರಚನೆ ಹಾಗೂ ಅದರ ಪ್ರಕಾರ್ಯಗಳು.

(1) ಪ್ರತಿಯೊಂದು ತಾಲ್ಲೂಕಿನಲ್ಲೂ ಈ ಮುಂದಿನ ಸದಸ್ಯರುಗಳಿರುವ ತಾಲ್ಲೂಕು ಮಟ್ಟದ ಮೇಲ್ವಿಚಾರಣಾ ಸಮಿತಿಯು ಇರತಕ್ಕದ್ದು.

| | | |
|---|---|---|
| 1 | ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ | ಅಧ್ಯಕ್ಷರು |
| 2 | ತಾಲ್ಲೂಕಿನ ತಹಶೀಲ್ದಾರ್ | ಉಪಾಧ್ಯಕ್ಷರು |
| 3 | ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆ ಅನುಷ್ಠಾನ ಮಾಡುತ್ತಿರುವ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು | ಸದಸ್ಯರು |
| 4 | ಜಿಲ್ಲೆಯ ಜಿಲ್ಲಾಧಿಕಾರಿಗಳು ನಾಮನಿರ್ದೇಶನ ಮಾಡಬೇಕಾದ ಆ ತಾಲ್ಲೂಕಿನ, ಅನುಸೂಚಿತ ಜಾತಿ/ ಅನುಸೂಚಿತ ಪಂಗಡಕ್ಕೆ ಸೇರಿರುವ ಜಿಪಂ/ ತಾಪಂನ ಚುನಾಯಿತ ಸದಸ್ಯರುಗಳಿಂದ ಮೂವರು ನಾಮನಿರ್ದೇಶಿತ ಸದಸ್ಯರುಗಳು. | ಸದಸ್ಯರುಗಳು |
| 5 | ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ | ಸದಸ್ಯ ಕಾರ್ಯದರ್ಶಿ |

ಎ) ನಾಮನಿರ್ದೇಶಿತರಾದ ಸದಸ್ಯರುಗಳ ಪದಾವಧಿ ಮೂವತ್ತು ತಿಂಗಳು.

ಬಿ) ಜಿಲ್ಲೆಯ ಜಿಲ್ಲಾಧಿಕಾರಿಯು ಲಿಖಿತದಲ್ಲಿ ದಾಖಲಿಸಬಹುದಾದ ಕಾರಣಗಳಿಗಾಗಿ ನಾಮನಿರ್ದೇಶಿತ ಸದಸ್ಯರುಗಳನ್ನು ತೆಗೆದು ಹಾಕಬಹುದಾಗಿದೆ.

ಸಿ) ತಾಲ್ಲೂಕು ಪಂಚಾಯಿತಿ ಸದಸ್ಯರುಗಳಿಗೆ ಅನ್ವಯಿಸಬಹುದಾದ ದರಗಳಲ್ಲಿ ನಾಮನಿರ್ದೇಶಿತ ಸದಸ್ಯರುಗಳಿಗೆ ಪ್ರಯಾಣ ಭತ್ಯೆಯೂ ಸೇರಿದಂತೆ ಉಪವೇಶನ ಶುಲ್ಕವನ್ನು ನೀಡಬಹುದಾಗಿದೆ.

2) ತಾಲ್ಲೂಕು ಮಟ್ಟದ ಮೇಲ್ವಿಚಾರಣಾ ಸಮಿತಿಯ ಪ್ರಕಾರ್ಯಗಳು ;

1. ತಾಲ್ಲೂಕು ಮಟ್ಟದ ಮೇಲ್ವಿಚಾರಣಾ ಸಮಿತಿಯು, ತಾಲ್ಲೂಕಿನಲ್ಲಿರುವ ಅನುಸೂಚಿತ ಸಮಿತಿಯು, ತಾಲ್ಲೂಕಿನಲ್ಲಿರುವ ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆಯ ಯುಕ್ತ ಅನುಷ್ಠಾನವನ್ನು ನೋಡಿಕೊಳ್ಳತಕ್ಕದ್ದು.
2. ತಾಲ್ಲೂಕು ಮಟ್ಟದ ಮೇಲ್ವಿಚಾರಣಾ ಸಮಿತಿಯು, ಭೌತಿಕ ಮತ್ತು ಆರ್ಥಿಕ ಕಾರ್ಯಪ್ರಗತಿಯನ್ನು ಪರಿಶೀಲಿಸಲು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.
3. ಅದು ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಗೆ ಅನುಸೂಚಿತ ಜಾತಿಗಳ ಉಪಯೋಜನೆಗಾಗಿ ನಮೂನೆ ಟಿಪಿಆರ್-1 ರಲ್ಲಿ ಹಾಗೂ ಬುಡಕಟ್ಟು ಉಪಹಂಚಿಕೆಗಾಗಿ ಟಿಪಿಆರ್-2 ರಲ್ಲಿ ಮಾಸಿಕ ಕಾರ್ಯಪ್ರಗತಿ ವರದಿಯನ್ನು ಸಲ್ಲಿಸತಕ್ಕದ್ದು.

4. ಆ ತಾಲ್ಲೂಕಿನಲ್ಲಿರುವ ಅನುಸೂಚಿತ ಜಾತಿಗಳು/ ಅನುಸೂಚಿತ ಬುಡಕಟ್ಟುಗಳಲ್ಲಿ ಗುರುತಿಸಲಾದ ಅಭಿವೃದ್ಧಿ ಅಂತರವನ್ನು ನಿವಾರಿಸುವ ಅಥವಾ ತಗ್ಗಿಸುವ ಮೇಲ್ವಿಚಾರಣೆಯನ್ನು ಮಾಡುವುದು.

5. ಯೋಜನಾವಾರು, ಗ್ರಾಮವಾರು, ಪಂಚಾಯತ್‌ವಾರು ಹಾಗೂ ಮತ ಕ್ಷೇತ್ರವಾರು ಭೌತಿಕ ಮತ್ತು ಆರ್ಥಿಕ ಸೌಲಭ್ಯಗಳನ್ನು ಹಾಗೂ ಫಲಾನುಭವಿಗಳ ಪಟ್ಟಿಯನ್ನು ನಿರ್ವಹಿಸತಕ್ಕದ್ದು.

6. ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆ ಅಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳು/ ಯೋಜನೆಗಳ ಭೌತಿಕ ಪರಿಶೀಲನೆಯನ್ನು ಮೂರನೇ ಪಕ್ಷಕಾರನ ಮೂಲಕ ಕೈಗೊಳ್ಳಲು ವ್ಯವಸ್ಥೆ ಮಾಡುವುದು.

7. ಪ್ರತಿಯೊಂದು ಇಲಾಖೆಯ ಭೌತಿಕ ಹಾಗೂ ಆರ್ಥಿಕ ಫಲಶ್ರುತಿಗಳನ್ನು ಹಾಗೂ ಅನುಸೂಚಿತ ಜಾತಿ ಉಪ-ಹಂಚಿಕೆ ಹಾಗೂ ಬುಡಕಟ್ಟು ಉಪ-ಹಂಚಿಕೆ ಅನುಷ್ಠಾನದ ಮೇಲಿನ ಅಭಿವೃದ್ಧಿಯಲ್ಲಿ ಅಂತರವನ್ನು ತಗ್ಗಿಸುವಲ್ಲಿ ಸಾಧಿಸಿದ ಸಾಧನೆಗಳನ್ನು ಸೇರಿಸಿ ರಾಜ್ಯ ನೋಡಲ್ ಇಲಾಖೆಗೆ ಒಂದು ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದು.

8. ಅನುಸೂಚಿತ ಜಾತಿ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆ ಅನುಷ್ಠಾನಕ್ಕೆ ಸಂಬಂಧಪಟ್ಟ ಕುಂದುಕೊರತೆಗಳ ಬಗ್ಗೆ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಮೇಲ್ವಿಚಾರಣಾ ಸಮಿತಿಯು, "ತಾಲ್ಲೂಕು ಮಟ್ಟದ ಕುಂದುಕೊರತೆಗಳ ನಿವಾರಣಾ ಘಟಕ" ವಾಗಿ ಸಹ ಕಾರ್ಯನಿರ್ವಹಿಸತಕ್ಕದ್ದು.

9. ಕಾಲಕಾಲಕ್ಕೆ ಸರ್ಕಾರ ಅಥವಾ ಅನುಸೂಚಿತ ಜಾತಿ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆಯು ತಾಲ್ಲೂಕು ಮಟ್ಟದ ಮೇಲ್ವಿಚಾರಣಾ ಸಮಿತಿಯು ಗೊತ್ತುಪಡಿಸಿದ ಯಾವುದೇ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

18. ಆಡಳಿತಾತ್ಮಕ ಮತ್ತು ತಾಂತ್ರಿಕ ನೆರವು ಘಟಕದ ರಚನೆ (9ನೇ ಪ್ರಕರಣ).

(1) ನೋಡಲ್ ಏಜೆನ್ಸಿಯು ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಮತ್ತು ಅಧಿನಿಯಮ ಮತ್ತು ಈ ನಿಯಮಗಳ ಮೇರೆಗೆ ವಿಶೇಷವಾಗಿ ಗೊತ್ತುಪಡಿಸಿದ ಕರ್ತವ್ಯಗಳನ್ನು ನಿರ್ವಹಿಸಲು ಅದಕ್ಕೆ ನೆರವಾಗಲು ನೋಡಲ್ ಇಲಾಖೆಯ ಸಚಿವಾಲಯದಲ್ಲಿ ಒಂದು ಆಡಳಿತಾತ್ಮಕ ಮತ್ತು ತಾಂತ್ರಿಕ ನೆರವು ಘಟಕವನ್ನು ರಚಿಸತಕ್ಕದ್ದು.

(2) ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು ಆಡಳಿತಾತ್ಮಕ ಹಾಗೂ ತಾಂತ್ರಿಕ ನೆರವು ಘಟಕದ ಮುಖ್ಯಸ್ಥನಾಗಿರತಕ್ಕದ್ದು.

(ಎ) ಘಟಕದ ಪ್ರಕಾರ್ಯಗಳನ್ನು ನಿರ್ವಹಿಸಲು ಅಗತ್ಯವಿರುವ ಎಲ್ಲಾ ಇತರ ಪೂರಕ ಸಿಬ್ಬಂದಿ.

(ಬಿ) ರಾಜ್ಯ ಸರ್ಕಾರವು ಆಡಳಿತಾತ್ಮಕ ಮತ್ತು ತಾಂತ್ರಿಕ ನೆರವು ಘಟಕವು ಸೂಕ್ತವಾಗಿ ಕಾರ್ಯನಿರ್ವಹಿಸಲು ಅಗತ್ಯವಾದಂಥ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಅಂಥ ಇತರ ಇಲಾಖೆಗಳಿಂದ ನಿಯೋಜಿಸಬಹುದು.

19. ಆಡಳಿತಾತ್ಮಕ ಮತ್ತು ತಾಂತ್ರಿಕ ನೆರವು ಘಟಕದ ಪ್ರಕಾರ್ಯಗಳು ಮತ್ತು ಕರ್ತವ್ಯಗಳು.

ಆಡಳಿತಾತ್ಮಕ ಮತ್ತು ತಾಂತ್ರಿಕ ನೆರವು ಘಟಕವು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(ಎ) ಇದು, ಯೋಜನಾ ಇಲಾಖೆ ಹಾಗೂ ಅನುಸೂಚಿತ ಜಾತಿ ಉಪ-ಹಂಚಿಕೆ ಹಾಗೂ ಬುಡಕಟ್ಟು ಉಪ-ಹಂಚಿಕೆ ಮೇಲ್ವಿಚಾರಣಾ ಘಟಕದ ಸಹಯೋಗದೊಂದಿಗೆ ಯೋಜನಾ ಘಟಕವಾಗಿ ಕೆಲಸ ನಿರ್ವಹಿಸುವುದು.

(ಬಿ) ಉಪ-ಹಂಚಿಕೆಗಳನ್ನು ಸಿದ್ಧಪಡಿಸುವಲ್ಲಿ ಮತ್ತು ಅಂತಿಮಗೊಳಿಸುವಲ್ಲಿ ನೋಡಲ್ ಇಲಾಖೆ ಮತ್ತು ಇತರ ಇಲಾಖೆಗಳಿಗೆ ನೆರವು ನೀಡುವುದು.

(ಸಿ) ಬೇರೆಬೇರೆ ಇಲಾಖೆಗಳಿಂದ ಯೋಜನಾವಾರು ಆಯವ್ಯಯ ಪ್ರಸ್ತಾವನೆಗಳನ್ನು ಸ್ವೀಕರಿಸುವುದು ಮತ್ತು ಪರಿಶೀಲಿಸುವುದು ಮತ್ತು ಅದರ ಮೌಲ್ಯ ನಿರ್ಣಯ ಮಾಡುವುದು ಹಾಗೂ ಅಭಿವೃದ್ಧಿಯಲ್ಲಿನ ಅಂತರವನ್ನು ನಿವಾರಿಸುವ ಗುರಿಗೆ ಅನುಸಾರವಾಗಿ ವಿಶೇಷವಾಗಿ ಅಧಿನಿಯಮ ಮತ್ತು ನಿಯಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಲ್ ಏಜೆನ್ಸಿಯ ಅನುಮೋದನೆಗಾಗಿ ಪ್ರತಿಯೊಂದು ಇಲಾಖೆಯ ಪ್ರಸ್ತಾವನೆಗಳ ಬಗ್ಗೆ ತಾಂತ್ರಿಕ ಟಿಪ್ಪಣಿಗಳನ್ನು ತಯಾರಿಸುವುದು.

(ಡಿ) ನೋಡಲ್ ಏಜೆನ್ಸಿಯ ನಿರ್ದೇಶನಗಳಿಗನುಸಾರವಾಗಿ ನೋಡಲ್ ಏಜೆನ್ಸಿ ಸಭೆಗಳನ್ನು ಏರ್ಪಡಿಸುವುದು ಹಾಗೂ ನೋಡಲ್ ಏಜೆನ್ಸಿಯ ಮುಂದೆ ಆಯವ್ಯಯ ಪ್ರಸ್ತಾವನೆಗಳನ್ನು ಹಾಜರುಪಡಿಸಲು ಇಲಾಖೆಗಳನ್ನು ಸಮರ್ಥಗೊಳಿಸುವುದು.

(ಇ) ವೆಬ್‌ಪೋರ್ಟಲ್‌ನ್ನು ನಿರ್ವಹಿಸುವುದು.

(ಎಫ್) ಸಾಮಾಜಿಕ ಲೆಕ್ಕಪರಿಶೋಧನೆಗಳನ್ನು ನಿಯತವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಸಾಮಾಜಿಕ ಲೆಕ್ಕಪರಿಶೋಧನೆಯ ನಿರ್ಣಯಗಳನ್ನು ಪಾಲಿಸುವುದು.

(ಜಿ) ಅನುಸೂಚಿತ ಜಾತಿ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆ ಅಡಿಯಲ್ಲಿ ನಿಧಿಗಳನ್ನು ಸಕಾಲದಲ್ಲಿ ಬಿಡುಗಡೆ ಮಾಡುವುದಕ್ಕಾಗಿ ಆರ್ಥಿಕ ಇಲಾಖೆಯಲ್ಲಿನ ಉಪ-ಹಂಚಿಕಾ ಘಟಕದೊಂದಿಗೆ ಸಮನ್ವಯ ಸಾಧಿಸುವುದು.

(ಹೆಚ್) ಅನುಷ್ಠಾನ ಇಲಾಖೆಗಳು/ ಜಿಲ್ಲಾ ಮೇಲ್ವಿಚಾರಣಾ ಸಮಿತಿಗಳಿಂದ ಪ್ರಗತಿ ವರದಿಗಳನ್ನು ಪಡೆಯುವುದು ಹಾಗೂ ಅವುಗಳ ಮೇಲ್ವಿಚಾರಣೆ ನಡೆಸುವುದು.

(ಐ) ಅನುಸೂಚಿತ ಜಾತಿ ಉಪ-ಹಂಚಿಕೆ ಹಾಗೂ ಬುಡಕಟ್ಟು ಉಪ-ಹಂಚಿಕೆ ಅನುಷ್ಠಾನದ ಪರಿಣಾಮವನ್ನು ನಿರ್ಧರಿಸುವುದಕ್ಕಾಗಿ ಸಮಾಜಿಕ-ಆರ್ಥಿಕ ಮತ್ತು ಮಾನವ ಅಭಿವೃದ್ಧಿ ಸೂಚಕಗಳನ್ನು ಇಂದೀಕರಿಸುವುದು.

(ಜೆ) ಅನುಸೂಚಿತ ಜಾತಿ ಉಪ-ಹಂಚಿಕೆ ಹಾಗೂ ಬುಡಕಟ್ಟು ಉಪ-ಹಂಚಿಕೆ ನಿಧಿಯ ಪರಿಣಾಮ ಮತ್ತು ಅನುಷ್ಠಾನದ ಬಗ್ಗೆ ವಾರ್ಷಿಕ ವರದಿಗಳನ್ನು ಪ್ರಕಟಿಸಲು ಏರ್ಪಾಡು ಮಾಡುವುದು.

(ಕೆ) ಅನುಷ್ಠಾನ ಇಲಾಖೆಗಳ ಅಧಿಕಾರಿಗಳು/ ನೌಕರರಿಗೆ ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಏರ್ಪಾಟು ಮಾಡುವುದು.

(ಎಲ್) ಉಪ ಹಂಚಿಕೆಗಳ ಅನುಷ್ಠಾನದ ಮೇಲ್ವಿಚಾರಣೆಗಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ನಿರಂತರ ಪರಿಶೀಲನಾ ಸಭೆಗಳನ್ನು ನಡೆಸುವುದು ಹಾಗೂ ಮುಂದಿನ ಕ್ರಮಕ್ಕಾಗಿ ಅನುಷ್ಠಾನ ಏಜೆನ್ಸಿಗಳಿಗೆ ಮಾರ್ಗದರ್ಶನ ನೀಡುವುದು.

(ಎಂ) ಅಧಿನಿಯಮ ಮತ್ತು ನಿಯಮಗಳ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಅರಿವು ಮೂಡಿಸುವುದು ಮತ್ತು ಸಮೂಹ ಸಂಪರ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

(ಎನ್) ಬೇರೆಬೇರೆ ಇಲಾಖೆಗಳು ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳಿಗೆ ಸಂಬಂಧಿಸಿದ ಸ್ವತ್ತುಗಳ ಪರಿಶೀಲನೆಗಾಗಿ ಕ್ಷೇತ್ರ ಸಂದರ್ಶನಗಳನ್ನು ಕೈಗೊಳ್ಳುವುದು.

(ಒ) ಪ್ರತಿಷ್ಠಿತ ಸಂಸ್ಥೆಗಳು ಮತ್ತು ವಿಶ್ವವಿದ್ಯಾನಿಲಯಗಳು ಹಾಗೂ ತಜ್ಞರುಗಳ ಸೇವೆಗಳನ್ನು ಪಡೆದುಕೊಳ್ಳುವ ಮೂಲಕ ನಿರಂತರ ಅಧ್ಯಯನಗಳು, ವಿಚಾರ ಸಂಕಿರಣಗಳು, ಸಮ್ಮೇಳನಗಳನ್ನು ಕೈಗೊಳ್ಳಲು ನೋಡಲ್ ಇಲಾಖೆಗೆ ನೆರವು ನೀಡುವುದು.

(ಪಿ) ನೋಡಲ್ ಏಜೆನ್ಸಿ ಮತು ರಾಜ್ಯ ಅನುಸೂಚಿತ ಜಾತಿ/ ಅನುಸೂಚಿತ ಬುಡಕಟ್ಟುಗಳ ಅಭಿವೃದ್ಧಿ ಪರಿಷತ್ತು ವಹಿಸಬಹುದಾದ ಯಾವುದೇ ಇತರ ಪ್ರಕಾರ್ಯಗಳು.

20. 10ನೇ ಪ್ರಕರಣದ ಮೇರೆಗೆ ಇಲಾಖಾ ಮಟ್ಟದ ಉಪ-ಹಂಚಿಕೆ ನೆರವು ಘಟಕದ ರಚನೆ.

(1) ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳಿಗನುಸಾರವಾಗಿ, ಉಪ-ಹಂಚಿಕೆ ಯೋಜನೆಗಳನ್ನು ಸಿದ್ಧಪಡಿಸಲು ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ, ಅನುಷ್ಠಾನ ಇಲಾಖೆಗಳಲ್ಲಿ ಆಡಳಿತಾತ್ಮಕ ಮತ್ತು ತಾಂತ್ರಿಕ ನೆರವು ಘಟಕವನ್ನು ಸ್ಥಾಪಿಸತಕ್ಕದ್ದು.

(2) ಅವಶ್ಯಕ ಸಿಬ್ಬಂದಿಯೊಂದಿಗೆ ಜಂಟಿ ನಿರ್ದೇಶಕ ಅಥವಾ ಉಪ-ಕಾರ್ಯದರ್ಶಿ ದರ್ಜೆಯ ಒಬ್ಬ ಅಧಿಕಾರಿಯು, ಇಲಾಖೆಗಳ ಉಪ-ಹಂಚಿಕೆ ನೆರವು ಘಟಕದ ಮುಖ್ಯಸ್ಥನಾಗಿರತಕ್ಕದ್ದು. ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿಗಳು/ ಸಂಬಂಧಪಟ್ಟ ಇಲಾಖೆಗಳ ಕಾರ್ಯದರ್ಶಿಗಳು, ಅನುಸೂಚಿತ ಜಾತಿ ಉಪ-ಹಂಚಿಕೆ ಹಾಗೂ ಬುಡಕಟ್ಟು ಉಪ-ಹಂಚಿಕೆ ಅಡಿಯಲ್ಲಿನ ಯೋಜನೆಗಳ ಅನುಷ್ಠಾನಕ್ಕೆ ಜವಾಬ್ದಾರರಾಗಿರುತ್ತಾರೆ.

21. ಇಲಾಖಾ ಮಟ್ಟದ ಉಪ-ಹಂಚಿಕೆ ನೆರವು ಘಟಕದ ಪ್ರಕಾರ್ಯಗಳು.

ಇಲಾಖಾ ಮಟ್ಟದ ಉಪ-ಹಂಚಿಕೆ ನೆರವು ಘಟಕವು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು:

(ಎ) ಇಲಾಖಾ ಮಟ್ಟದ ಉಪ-ಹಂಚಿಕೆ ನೆರವು ಘಟಕವು ವಿಶೇಷವಾಗಿ ಅನುಸೂಚಿತ ಜಾತಿಗಳ ಉಪ ಹಂಚಿಕೆ ಹಾಗೂ ಬುಡಕಟ್ಟು ಉಪ-ಹಂಚಿಕೆ ಅನುಷ್ಠಾನ ಕುರಿತು ಯೋಜನೆ ತಯಾರಿಸುವ ಮೇಲ್ವಿಚಾರಣೆ ನಡೆಸುವ ಮತ್ತು ವರದಿ ಮಾಡುವ ಕಾರ್ಯದಲ್ಲಿ ತೊಡಗಿಸಿಕೊಳ್ಳತಕ್ಕದ್ದು.

(ಬಿ) ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆಯ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂಥ ನೋಡಲ್ ಇಲಾಖೆಯ ಆಡಳಿತಾತ್ಮಕ ಮತ್ತು ತಾಂತ್ರಿಕ ಬೆಂಬಲ ಘಟಕಗಳೊಂದಿಗೆ ಸಮನ್ವಯ ಸಾಧಿಸುವುದು.

(ಸಿ) ರಾಜ್ಯಮಟ್ಟದ ಅನುಷ್ಠಾನ ಇಲಾಖೆಗಳು (ಅನುಸೂಚಿತ ಜಾತಿಗಳ ಉಪಯೋಜನೆಗಾಗಿ ನಮೂನೆ ಎಂಪಿಆರ್-1 ಮತ್ತು ಬುಡಕಟ್ಟು ಉಪ-ಹಂಚಿಕೆಗಾಗಿ ನಮೂನೆ ಎಂಪಿಆರ್-2) ನಮೂನೆಯಲ್ಲಿ ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆಯಲ್ಲಿ ತಿಂಗಳ ಪ್ರಗತಿ ವರದಿಯನ್ನು ನೋಡಲ್ ಇಲಾಖೆಗೆ ಸಲ್ಲಿಸತಕ್ಕದ್ದು.ಇದರೊಂದಿಗೆ, ಅನುಷ್ಠಾನ ಇಲಾಖೆಗಳು (ಅನುಸೂಚಿತ ಜಾತಿಗಳ ಉಪಯೋಜನೆಗಾಗಿ ನಮೂನೆ ಕ್ಯೂಪಿಆರ್-1 ಮತ್ತು ಬುಡಕಟ್ಟು ಉಪಯೋಜನೆಗಾಗಿ ಕ್ಯೂಪಿಆರ್-2) ಆ ನಮೂನೆಯಲ್ಲಿ ಲಗತ್ತಿಸಲಾದ ಜಿಲ್ಲಾವಾರು/ ಸ್ಕೀಮ್‌ವಾರು ತ್ರೈಮಾಸಿಕ ಪ್ರಗತಿಗಳ ವಿವರ ಪಟ್ಟಿಯನ್ನು ಸಹ ಸಲ್ಲಿಸುವುದು.

22. 21ನೇ ಪ್ರಕರಣದ ಮೇರೆಗೆ ಆರ್ಥಿಕ ಇಲಾಖೆಯಲ್ಲಿ ಉಪ-ಯೋಜನೆಗಳ ಬೆಂಬಲ/ ಘಟಕಗಳು.

ಅನುಮೋದನೆಗಳನ್ನು ಶೀಘ್ರಗೊಳಿಸುವ ಕ್ರಮದಲ್ಲಿ, ಅನುಸೂಚಿತ ಜಾತಿ ಉಪ-ಹಂಚಿಕೆ/ ಬುಡಕಟ್ಟು ಉಪ-ಹಂಚಿಕೆ ಮೇರೆಗೆ ಹಣಕಾಸಿನ ಅನುಮೋದನೆಗಳು, ನಿಧಿಗಳು, ಇತ್ಯಾದಿ ಬಿಡುಗಡೆಗೆ ಹಾಜರಾಗುವ ಅವಶ್ಯಕ ಸಿಬ್ಬಂದಿಯ ನೆರವಿನೊಂದಿಗೆ ಕಾರ್ಯದರ್ಶಿ ಅಥವಾ ವಿಶೇಷ ಕಾರ್ಯದರ್ಶಿ ಮಟ್ಟದ ಅಧಿಕಾರಿ ಮುಖ್ಯಸ್ಥರಾಗಿರುವ ಘಟಕ ನೆರವನ್ನು ಉಪ-ಯೋಜನೆಗಳನ್ನು ಆರ್ಥಿಕ ಇಲಾಖೆಯು ಪ್ರಾರಂಭಿಸತಕ್ಕದ್ದು.

23. ಅನುಸೂಚಿತ ಜಾತಿಗಳ ಉಪ-ಹಂಚಿಕೆ, ಬುಡಕಟ್ಟು ಉಪ-ಹಂಚಿಕೆ ಸಾಮಾಜಿಕ ಲೆಕ್ಕಪರಿಶೋಧನೆ.

(1) ನೋಡಲ್ ಇಲಾಖೆಯು, ಕಾಲಕಾಲಕ್ಕೆ ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆ ಮೇರೆಗೆ ಉಂಟಾದ ಮತ್ತು ಫಲಿತಾಂಶಗಳ ವೆಚ್ಚದ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವುದಕ್ಕೆ ಯುಕ್ತ ಏಜೆನ್ಸಿಯನ್ನು ನೇಮಕ ಮಾಡತಕ್ಕದ್ದು.

(2) ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವುದಕ್ಕೆ ವಿಧಾನಗಳು ಮತ್ತು ಕ್ರಮವನ್ನು ಇತರೆ ಇಲಾಖೆಗಳೊಂದಿಗೆ ಸಮಾಲೋಚಿಸಿ ನೋಡಲ್ ಇಲಾಖೆಯಿಂದ ನಿರ್ಧರಿಸಲಾಗುತ್ತದೆ. ನೋಡಲ್ ಇಲಾಖೆಯು ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವುದಕ್ಕಾಗಿ ಅವಶ್ಯಕ ನಿಧಿಗಳನ್ನು ಒದಗಿಸತಕ್ಕದ್ದು.

(3) ಅನುಸರಿಸುವ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗಿ ನೋಡಲ್ ಏಜೆನ್ಸಿ ಮತ್ತು ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ಸಾಮಾಜಿಕ ಲೆಕ್ಕಪರಿಶೋಧನೆಯ ನಿರ್ಣಯಗಳನ್ನು ತರತಕ್ಕದ್ದು.

(4) ಸಾಮಾಜಿಕ ಲೆಕ್ಕಪರಿಶೋಧನೆಯ ನಿರ್ಣಯಗಳನ್ನು ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸತಕ್ಕದ್ದು. ಸಂಬಂಧಪಟ್ಟ ಇಲಾಖೆಯು ಆರು ತಿಂಗಳೊಳಗೆ ಸಾಮಾಜಿಕ ಲೆಕ್ಕಪರಿಶೋಧನೆಯ ನಿರ್ಣಯಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು. ವಿಫಲವಾದಲ್ಲಿ ಕಾರ್ಯಲೋಪವೆಂದು ಪರಿಗಣಿಸಿ ಮತ್ತು ದಂಡ ವಿಧಿಸುವ ಉಪಬಂಧಗಳನ್ನು ಅಧಿನಿಯಮದ 24ನೇ ಪ್ರಕರಣದನುಸಾರ ಅನ್ವಯವಾಗುವುದು.

24. ಅಧಿನಿಯಮದ 24ನೇ ಪ್ರಕರಣದ ಮೇರೆಗೆ ದೂರುಗಳು/ ದಂಡನೆಗಳು:

(1) ದೂರನ್ನು ಸ್ವೀಕರಿಸಿದ ಮೇಲೆ ಅಥವಾ ತಾನಾಗಿಯೇ ಸ್ವಪ್ರೇರಣೆಯಿಂದಾಗಲಿ ಅದರ ಮೇಲೆ ನೋಡಲ್ ಇಲಾಖೆಯು ಅನುಸೂಚಿತ ಜಾತಿಗಳ ಉಪ–ಹಂಚಿಕೆ ಮತ್ತು ಬುಡಕಟ್ಟು ಉಪ–ಹಂಚಿಕೆ ಅಧಿನಿಯಮ ಮತ್ತು ನಿಯಮಗಳ ಮೇರೆಗೆ ಅವನ ಕರ್ತವ್ಯಗಳ ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುವಂಥ ಸಾರ್ವಜನಿಕ ನೌಕರನಾಗಿರುವ ಯಾವುದೇ ಕಾರ್ಯನಿರ್ವಾಹಕ ಅಥವಾ ಅಧಿಕಾರಿಯ ವಿರುದ್ಧ ಶಿಸ್ತಿನ ಕ್ರಮವನ್ನು ಜರುಗಿಸಬಹುದು.

(2) ದೂರುಗಳನ್ನು ನಿರ್ದಿಷ್ಟಪಡಿಸುವುದು ಮತ್ತು ದೂರನ್ನು ನಮೂದಿಸುವವರ ಹೆಸರು, ವಿಳಾಸ ಮತ್ತು ಸಹಿ ತಿಳಿಸುವುದು.

(3) ವಿಚಾರಣೆಗಾಗಿ ಯುಕ್ತ ಪ್ರಾಧಿಕಾರಕ್ಕೆ ದೂರನ್ನು ಮತ್ತು ದೂರುಗಳ ವಾಸ್ತವಾಂಶಗಳ ಮೇಲೆ ವರದಿಯನ್ನು ಕಳುಹಿಸುವುದಕ್ಕಾಗಲಿ ನೋಡಲ್ ಇಲಾಖೆ ನಿರ್ದೇಶಿಸುವುದು.

(4) ವಿಚಾರಣಾ ಪ್ರಾಧಿಕಾರವು, ಹಾಗೆ ಅಗತ್ಯಪಡಿಸಿದರೆ ಹೆಚ್ಚುವರಿ ವಿವರಗಳು ಮತ್ತು ದೂರುಗಳಿಗೆ ನೆರವಾಗುವ ಮುಖ್ಯ ವಿವರಗಳಿದ್ದರೆ ಪಡೆಯಬಹುದು.

(5) ವಿಚಾರಣಾ ಪ್ರಾಧಿಕಾರವು ದೂರನ್ನು ಸ್ವೀಕರಿಸಿದ ತೊಂಭತ್ತು ದಿನಗಳೊಳಗೆ ವಿಚಾರಣೆಯನ್ನು ಪೂರ್ಣಗೊಳಿಸತಕ್ಕದ್ದು ಮತ್ತು ವರದಿಯನ್ನು ಸಲ್ಲಿಸತಕ್ಕದ್ದು.

(6) ವಿಚಾರಣಾ ವರದಿಯನ್ನು ಸ್ವೀಕರಿಸಿದ ತರುವಾಯ ನೋಡಲ್ ಇಲಾಖೆಯು ನೋಡಲ್ ಏಜೆನ್ಸಿಯ ಮುಂದೆ ಅದನ್ನು ಇಡುವುದು ಮತ್ತು ಕರ್ತವ್ಯಲೋಪದ ಸ್ವರೂಪದ ಮೇಲೆ ಅವಲಂಬಿತವಾಗಿ ನೋಡಲ್ ಏಜೆನ್ಸಿಯ ಪೂರ್ವಾನುಮೋದನೆಯೊಂದಿಗೆ ಸೂಕ್ತ ಕ್ರಮವನ್ನು ಜರುಗಿಸಬಹುದು.

25. ಅಧಿನಿಯಮದ 25ನೇ ಪ್ರಕರಣದ ಮೇರೆಗೆ ದೂರುಗಳನ್ನು ದಾಖಲಿಸುವುದು:

ಜಿಲ್ಲಾ ಮಟ್ಟದಲ್ಲಿ ಪ್ರಕಾರ್ಯಗಳನ್ನು ಅನುಷ್ಠಾನ ಅಧಿಕಾರಿಗಳು/ ನೌಕರ ಮತ್ತು ಅದಕ್ಕಿಂತ ಕೆಳಗಿನವರು ಮಾಡಲಾದ ಅಪರಾಧಗಳಿಗೆ ಸಂಬಂಧಿಸಿದಂತೆ ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ಅನುಸೂಚಿತ ಬುಡಕಟ್ಟು ಕಲ್ಯಾಣ ಅಧಿಕಾರಿಗಳು ಮತ್ತು ರಾಜ್ಯಮಟ್ಟದ ಅನುಷ್ಠಾನ ಅಧಿಕಾರಿಗಳು/ ನೌಕರರಿಗೆ ಸಂಬಂಧಿಸಿದಂತೆ ಅನುಸೂಚಿತ ಜಾತಿಗಳ ಉಪ–ಹಂಚಿಕೆ ಮತ್ತು ಬುಡಕಟ್ಟು ಉಪ–ಹಂಚಿಕೆ ಜಂಟಿ ನಿರ್ದೇಶಕರನ್ನು ಅಧಿನಿಯಮದ 25ನೇ ಪ್ರಕರಣದ ಮೇರೆಗೆ ದೂರುಗಳನ್ನು ದಾಖಲಿಸುವ ಉದ್ದೇಶಕ್ಕಾಗಿ ಈ ಮೂಲಕ ಅಧಿಕೃತಗೊಳಿಸಲಾಗಿದೆ. ಆದಾಗ್ಯೂ, ದೂರನ್ನು ನೋಡಲ್ ಏಜೆನ್ಸಿಯ ಪೂರ್ವಾನುಮತಿಯೊಂದಿಗೆ ಮಾತ್ರ ದಾಖಲು ಮಾಡತಕ್ಕದ್ದು.

26. ವಾರ್ಷಿಕ ವರದಿ:

ನೋಡಲ್ ಏಜೆನ್ಸಿ ಮತ್ತು ರಾಜ್ಯ ಪರಿಷತ್ತಿನ ಅನುಮೋದನೆಯೊಂದಿಗೆ ನೋಡಲ್ ಇಲಾಖೆಯು, ವರದಿಯ ಮೇರೆಗೆ ಹಣಕಾಸು ವರ್ಷದ ಅವಧಿಯಲ್ಲಿ ಇಲಾಖಾವಾರು ಸಾಧನೆಗಳನ್ನು ಒಳಗೊಂಡು ಮತ್ತು ಅನುಸೂಚಿತ ಜಾತಿಗಳ ಉಪ–ಹಂಚಿಕೆ ಮತ್ತು ಬುಡಕಟ್ಟು ಉಪ–ಹಂಚಿಕೆ ಅನುಷ್ಠಾನದ ಫಲಿತಾಂಶಕ್ಕೆ ಸಂಬಂಧಿಸಿದಂತೆ 26ನೇ ಪ್ರಕರಣದ ಮೇರೆಗೆ ವಾರ್ಷಿಕ ವರದಿಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್

ಸರ್ಕಾರದ ಜಂಟಿ ಕಾರ್ಯದರ್ಶಿ,

ಸಮಾಜ ಕಲ್ಯಾಣ ಇಲಾಖೆ.

**ನಮೂನೆ–1**

**(11(5)ನೇ ನಿಯಮವನ್ನು ನೋಡಿ)**

....... ವರ್ಷದ ಅನುಸೂಚಿತ ಜಾತಿಗಳ ಉಪಯೋಜನೆಯ ಸ್ಕೀಮುವಾರು ಬಜೆಟ್ ಪೂರ್ವ ಪ್ರಸ್ತಾವನೆಗಳು

ಇಲಾಖೆಯ ಹೆಸರು ..........

| ಕ್ರ. ಸಂ. | ಸ್ಕೀಮಿನ ಹೆಸರು | ಚಾಲ್ತಿಯಲ್ಲಿರುವ ಲೆಕ್ಕ ಶೀರ್ಷಿಕೆ | ಅಗತ್ಯಪಡಿಸಲಾದ ಮೊತ್ತ (₹. ಲಕ್ಷಗಳಲ್ಲಿ) | ಎಸ್‌ಸಿ ಗಳಿಗೆ ಸಹಾಯ ಧನ ಮಟ್ಟಗಳು ಒಳಗೊಂಡ ಪ್ರಯೋಜನಗಳ ವಿವರಗಳು | ಭೌತಿಕ ಗುರಿ ಪ್ರಯೋಜನಗಳು/ ಕೆಲಸಗಳು | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| ರಾಜಸ್ವ ಮುಖ್ಯಶೀರ್ಷಿಕೆ – ರಾಜ್ಯ ವಲಯ | | | | | | |
| 1 | | | | | | |
| 2 | | | | | | |
| | | | | | | |
| ರಾಜ್ಯ ಮುಖ್ಯ ಶೀರ್ಷಿಕೆ ಜಿಲ್ಲಾ ವಲಯ | | | | | | |
| 1 | | | | | | |
| 2 | | | | | | |
| | | | | | | |
| ಬಂಡವಾಳ ಮುಖ್ಯ ಶೀರ್ಷಿಕೆ – ರಾಜ್ಯ ವಲಯ | | | | | | |
| 1 | | | | | | |
| 2 | | | | | | |
| | | | | | | |

ಸಹಿ ಮತ್ತು ಮೊಹರು

**ನಮೂನೆ–2**

**(12(3)ನೇ ನಿಯಮವನ್ನು ನೋಡಿ)**

....... ವರ್ಷದ ಅನುಸೂಚಿತ ಜಾತಿಗಳ ಉಪಯೋಜನೆಯಡಿ ಸ್ಕೀಮುವಾರು ಬಜೆಟ್ ಪೂರ್ವ ಕ್ರಿಯಾಯೋಜನೆ

ಇಲಾಖೆಯ ಹೆಸರು ..........

| ಕ್ರ. ಸಂ. | ಸ್ಕೀಮಿನ ಹೆಸರು | ಚಾಲ್ತಿಯಲ್ಲಿರುವ ಲೆಕ್ಕ ಶೀರ್ಷಿಕೆ | ಅಗತ್ಯಪಡಿಸಲಾದ ಮೊತ್ತ (₹. ಲಕ್ಷಗಳಲ್ಲಿ) | ಎಸ್‌ಟಿ ಗಳಿಗೆ ಸಹಾಯ ಧನ ಮಟ್ಟಗಳು ಒಳಗೊಂಡ ಪ್ರಯೋಜನಗಳ ವಿವರಗಳು | ಭೌತಿಕ ಗುರಿ ಪ್ರಯೋಜನಗಳು/ ಕೆಲಸಗಳು | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| ರಾಜಸ್ವ/ಕಂದಾಯ ಮುಖ್ಯಶೀರ್ಷಿಕೆ – ರಾಜ್ಯ ವಲಯ | | | | | | |
| 1 | | | | | | |
| 2 | | | | | | |
| | | | | | | |
| ರಾಜ್ಯಸ್ವ ಮುಖ್ಯ ಶೀರ್ಷಿಕೆ– ಜಿಲ್ಲಾ ವಲಯ | | | | | | |
| 1 | | | | | | |
| 2 | | | | | | |
| | | | | | | |

| 1 | 2 | 3 | 4 | 5 | 6 | 7 |
|---|---|---|---|---|---|---|
| ಬಂಡವಾಳ ಮುಖ್ಯ ಶೀರ್ಷಿಕೆ – ರಾಜ್ಯ ವಲಯ | | | | | | |
| 1 | | | | | | |
| 2 | | | | | | |
| | | | | | | |

ಸಹಿ ಮತ್ತು ಮೊಹರು

ನಮೂನೆ–3

(11(5)ನೇ ನಿಯಮವನ್ನು ನೋಡಿ)

.................. ವರ್ಷದ ಬುಡಕಟ್ಟು ಉಪ–ಯೋಜನೆಯಡಿ ಸ್ಕೀಮುವಾರು ಬಜೆಟ್ ಪೂರ್ವ ಕ್ರಿಯಾಯೋಜನೆ

ಇಲಾಖೆಯ ಹೆಸರು ..........

| ಕ್ರ. ಸಂ. | ಸ್ಕೀಮಿನ ಹೆಸರು | ಚಾಲ್ತಿಯಲ್ಲಿರುವ ಲೆಕ್ಕ ಶೀರ್ಷಿಕೆ | ಅಗತ್ಯಪಡಿಸಲಾದ ಮೊತ್ತ (₹. ಲಕ್ಷಗಳಲ್ಲಿ) | ಎಸ್‌ಟಿ ಗಳಿಗೆ ಸಹಾಯ ಧನ ಮಟ್ಟಗಳು ಒಳಗೊಂಡ ಪ್ರಯೋಜನಗಳ ವಿವರಗಳು | ಭೌತಿಕ ಗುರಿ ಪ್ರಯೋಜನಗಳು/ ಕೆಲಸಗಳು | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| ರಾಜಸ್ವ/ ಕಂದಾಯ ಮುಖ್ಯ ಶೀರ್ಷಿಕೆ – ರಾಜ್ಯ ವಲಯ | | | | | | |
| 1 | | | | | | |
| 2 | | | | | | |
| | | | | | | |
| ರಾಜಸ್ವ ಮುಖ್ಯ ಶೀರ್ಷಿಕೆ – ಜಿಲ್ಲಾ ವಲಯ | | | | | | |
| 1 | | | | | | |
| 2 | | | | | | |
| | | | | | | |
| ಬಂಡವಾಳ ಮುಖ್ಯ ಶೀರ್ಷಿಕೆ – ರಾಜ್ಯ ವಲಯ | | | | | | |
| 1 | | | | | | |
| 2 | | | | | | |
| | | | | | | |

ಸಹಿ ಮತ್ತು ಮೊಹರು

ನಮೂನೆ–4

(12(3)ನೇ ನಿಯಮವನ್ನು ನೋಡಿ)

....... ವರ್ಷದ ಅನುಸೂಚಿತ ಜಾತಿಗಳ ಉಪಯೋಜನೆಯಡಿ ಸ್ಕೀಮುವಾರು ಬಜೆಟ್ ಪೂರ್ವ ಕ್ರಿಯಾಯೋಜನೆ

ಇಲಾಖೆಯ ಹೆಸರು ..........

| ಕ್ರ. ಸಂ. | ಸ್ಕೀಮಿನ ಹೆಸರು | ಚಾಲ್ತಿಯಲ್ಲಿರುವ ಲೆಕ್ಕ ಶೀರ್ಷಿಕೆ | ಅಗತ್ಯಪಡಿಸಲಾದ ಮೊತ್ತ (₹. ಲಕ್ಷಗಳಲ್ಲಿ) | ಎಸ್‌ಟಿ ಗಳಿಗೆ ಸಹಾಯ ಧನ ಮಟ್ಟಗಳು ಒಳಗೊಂಡ ಪ್ರಯೋಜನಗಳ ವಿವರಗಳು | ಭೌತಿಕ ಗುರಿ ಪ್ರಯೋಜನಗಳು/ ಕೆಲಸಗಳು | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| ರಾಜಸ್ವ/ ಕಂದಾಯ ಮುಖ್ಯ ಶೀರ್ಷಿಕೆ – ರಾಜ್ಯ ವಲಯ | | | | | | |
| 1 | | | | | | |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| 1 | 2 | 3 | 4 | 5 | 6 | 7 |
|---|---|---|---|---|---|---|
| 2 | | | | | | |
| | | | | | | |
| ರಾಜ್ಯ ಮುಖ್ಯ ಶೀರ್ಷಿಕೆ – ಜಿಲ್ಲಾ ವಲಯ | | | | | | |
| 1 | | | | | | |
| 2 | | | | | | |
| | | | | | | |
| ಬಂಡವಾಳ ಮುಖ್ಯ ಶೀರ್ಷಿಕೆ – ರಾಜ್ಯ ವಲಯ | | | | | | |
| 1 | | | | | | |
| 2 | | | | | | |
| | | | | | | |

ಸಹಿ ಮತ್ತು ಮೊಹರು

ಗೋಪಾಲ್
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ.

P.R. 560
SC-500

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59.